ಉಪಚುನಾವಣೆಗಳು

ಧಾರವಾಡ ಗ್ರಾಮೀಣ ಪ್ರದೇಶದ ಉಪಚುನಾವಣೆಯು ಕರ್ನಾಟಕದಲ್ಲಿ ಗುಂಡೂರಾಯರ ಆಡಳಿತ ಬಂದ ನಂತರದ ಎರಡನೇ ಉಪಚುನಾವಣೆ. ಒಂದನೇ ಉಪಚುನಾವಣೆಯಲ್ಲಿ ಕಾಂಗ್ರೆಯು ಎರಡೂ ಸ್ಥಾನಗಳಲ್ಲಿ ಒಂದನ್ನು ಮಾತ್ರ ಪಡೆದಿತ್ತು.

ಇದೀಗ ಒಂದೂವರೆ ವರ್ಷಗಳ ರಾಯರ ಆಡಳಿತೆಯ ಕಹಿ ಅನುಭವದ ನಂತರ ಈ ಉಪಚುನಾವಣೆಯು ನಡೆಯುತ್ತಿರುವುದರಿಂದ ಈ ಚುನಾವಣೆಯು ಇನ್ನೂ ಮಹತ್ವವುಳ್ಳದ್ದಾಗಿದೆ. ಕಾರಣ : ರಾಯರ ಸರಕಾರದ ಕುರಿತು ಇದೊಂದು ಜನತೆಯ ಅಪ್ರತ್ಯಕ್ಷ ತೀರ್ಪಾಗಲಿದೆ.

ರಾಜ್ಯಾದ್ಯಂತ ಕಾರ್ಮಿಕರು, ರೈತರು, ವಿದ್ಯಾರ್ಥಿಗಳು, ಯುವಜನರು ತೀವ್ರತರದ ಹೋರಾಟಗಳನ್ನು ನಡೆಸಿದ ಹಿನ್ನೆಲೆಯಲ್ಲಿ ಈ ಉಪಚುನಾವಣೆ ನಡೆಯುತ್ತಿದೆ ಎಂಬುದಂತೂ ಪರಿಗಣನೆಗೆ ತೆಗೆದುಕೊಂಡಾಗ ಈ ಚುನಾವಣೆಯ ಮಹತ್ವ ಇನ್ನಷ್ಟು ಹೆಚ್ಚಾಗಿದೆ ಎಂಬುದರ ಅರಿವಾಗುತ್ತದೆ. ಕಳೆದ 6 ತಿಂಗಳಲ್ಲಿ 63 ರೈತ-ಕಾರ್ಮಿಕ ವಿದ್ಯಾರ್ಥಿ ಗುಂಡಿಗೆ ಬಲಿಯಾಗಿರುವ ಹಿನ್ನೆಲೆಯಲ್ಲಿ !

ಸಂಪಾದಕೀಯ

ಗುಂಡೂರಾಯರ ಸರಕಾರವು ಜನರ ಯಾವ ಸಮಸ್ಯೆಗಳನ್ನು ಬಗೆಹರಿಸಿವೆ ಎಂದು ಯೋಚಿಸಿದರೆ ಈ ಸರಕಾರದ 'ವಿಫಲತೆ' ಎದ್ದು ಕಾಣುವುದು. ರೈತ ಅಸದೃಶ ಹೋರಾಟಗಳನ್ನು ನಡೆಸಿ ತಮ್ಮ ನ್ಯಾಯವಾದ ಬೇಡಿಕೆಗಳನ್ನು ಸರಕಾರದ ಮುಂದಿಟ್ಟಾಗ, ಈ ಬೇಡಿಕೆಗಳ ಕುರಿತು ಎಲ್ಲಾ ತರದ ಭರವಸೆಗಳನ್ನು ಇತ್ತು ಅವುಗಳಲ್ಲಿ ಒಂದೇಒಂದು ಭರವಸೆಯನ್ನು ಗುಂಡೂರಾಯರು ಈಡೇರಿಸಲಿಲ್ಲ.

ಭ್ರಷ್ಟಾಚಾರ ದಿನದಿಂದ ದಿನ ಹೆಚ್ಚು ಇದೀಗ ಗುಂಡೂರಾಯರ ಕ್ಯಾಬಿನೆಟ್ ಮಂತ್ರಿಯೊಬ್ಬರು ರಾಜೀನಾಮೆಕೊಡಲು ನಿರ್ಬಂಧಿತರಾಗಿದ್ದಾರೆ.

ಗುಂಡೂರಾಯರ ಸರಕಾರಕ್ಕೂ ರಾಜ್ಯದ ಸಮಗ್ರ ಜನತೆಗೂ ನಡುವಿನ ವೈರುಧ್ಯವು ಅತ್ಯಂತ ಸ್ಪಷ್ಟರೂಪದಲ್ಲಿ ಕಾಣುತ್ತಿರುವಾಗ ಈ ಚುನಾವಣೆ ನಡೆಯುತ್ತಿದೆ.

ಜನತೆಯು ನ್ಯಾಯವಾದ ತೀರ್ಪನ್ನೀಯಲು ಸಹಾಯವಾಗುವಂತೆ ಕಾಂಗ್ರೆಯ ವಿರುದ್ಧದ ಮತಗಳು ಹಂಚಿಹೋಗದಂತೆ ನೋಡುವುದು ಎಲ್ಲ ವಿರೋಧ ಪಕ್ಷಗಳ ಕರ್ತವ್ಯ. ಈಗಾಗಲೇ ಈ ದಿಸೆಯಲ್ಲಿ ಸ್ವಲ್ಪ ಪ್ರಯತ್ನ ನಡೆದಿದೆ. ಕಾಂಗ್ರೆಸ್, ಲೋಕದಳ ಪಕ್ಷಗಳು ಜನತಾಪಕ್ಷದ ಅಭ್ಯರ್ಥಿಗೆ ಬೆಂಬಲವೀಯಲು ನಿರ್ಣಯಿಸಿವೆ.

ಈ ಪರಿಸ್ಥಿತಿಯಲ್ಲಿ ಎಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಇದೇ ನಿಲುಮೆಯನ್ನು ತೆಗೆದುಕೊಂಡು ಕಾಂಗ್ರೆಯನ್ನು ಸೋಲಿಸಲು ಮುಂದಾಗಬೇಕಾಗಿದೆ.

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 21 | ಮೇ 24, 1981 | ಬೆಲೆ : 60 ಪೈಸೆ

ದಿನೇ ದಿನೇ ಹೆಚ್ಚುತ್ತಿರುವ ಕಾರ್ಮಿಕ ವಿರೋಧಿ ಧೋರಣೆಗಳು

ಪ್ರತಿಭಟನೆಗೆ ಕಾರ್ಮಿಕ ವರ್ಗದ ಸನ್ನಾಹ

ದೇಶದಾದ್ಯಂತ ಕಾರ್ಮಿಕ ಸಂಘಟನೆಯ ಮೇಲೆ ಸರಕಾರದ ದಬ್ಬಾಳಿಕೆ ಹೆಚ್ಚುತ್ತಿದೆ. ಜೀವನಾವಶ್ಯಕ ವಸ್ತುಗಳ ಬೆಲೆ ಗಗನಕ್ಕೇರಿರುವದಲ್ಲದೇ, ಕಾರ್ಮಿಕರ ನಿಜವೇತನ ಸ್ಥಗಿತಗೊಳಿಸುವ ಸನ್ನಾಹ ನಡೆಯುತ್ತಿದೆ. ಸರಕಾರದ ದಿವಾಳಿಖೋರ ಆರ್ಥಿಕ ನೀತಿಯ ಕಾರಣದಿಂದಾಗಿ ಸಂಪತ್ತು ಕೆಲವೇ ಜನರ ಕೈಯಲ್ಲಿ ಕೇಂದ್ರೀಕೃತವಾಗುತ್ತಿದ್ದು. ಅಸಂಖ್ಯಾತ ಜನರು ಬಡತನ ರೇಖೆಗಿಂತಲೂ ಕೆಳಮಟ್ಟಕ್ಕೆ ನೂಕಲ್ಪಟ್ಟಿದ್ದಾರೆ.

ಕಾರ್ಮಿಕ ವರ್ಗ ಅನಿವಾರ್ಯವಾಗಿ ಹೋರಾಟಕ್ಕೆ ಅಣಿಯಾಗುತ್ತಿರುವಾಗ ಭೀಕರ ದಬ್ಬಾಳಿಕೆ ನಡೆಸಲಾಗುತ್ತಿದೆ. 77ದಿನಗಳ ಸಾರ್ವಜನಿಕ ಉದ್ದಿಮೆ ವಲಯದ ಕಾರ್ಮಿಕರ ಮುಷ್ಕರವನ್ನು ಕುರಿತು, ಬೃಹತ್ ಪ್ರಮಾಣದಲ್ಲಿ ರೈಲ್ವೆ ಕಾರ್ಮಿಕರ ಕಡ್ಡಾಯ ನಿವೃತ್ತಿ ಮತ್ತು ಸಸ್ಪೆನ್ಷನ್, ಎಲ್ಲೈಸಿ ವಿವಾದದಲ್ಲಿ ಸರಕಾರ ಅನುಸರಿಸಿದ ಧೋರಣೆ ಇವೆಲ್ಲ ಸರಕಾರದ ನೀತಿಗೆ ಉದಾಹರಣೆಗಳು.

ಮಾರ್ಚ್ 11ರಂದು ದೇಶದ ಎಲ್ಲ ಸಾರ್ವಜನಿಕ ಉದ್ದಿಮೆವಲಯಗಳ ಕಾರ್ಮಿಕರ ಜಂಟೀ ಮುಷ್ಕರ, ಸರಕಾರದ ನೀತಿಯ ವಿರುದ್ಧ ನಡೆದ ಕಾರ್ಮಿಕವರ್ಗ ಹೋರಾಡಲು ಸಿದ್ಧವಾಗುತ್ತಿರುವ ಮುನ್ಸೂಚನೆಯಾಗಿದೆ. ಸರಕಾರದ ಧೋರಣೆ ಬದಲಾಯಿಸಲು ಕಾರ್ಮಿಕವರ್ಗ ಐಕ್ಯತೆಯಿಂದ ಮುನ್ನಡೆಯುತ್ತಿರುವದರ ಸಂಕೇತವಾಗಿದೆ.

ಬೆಲೆ ಏರಿಕೆ ವಿರುದ್ಧ, ಕಾರ್ಮಿಕ ವಿರೋಧಿ ಧೋರಣೆಯ ವಿರುದ್ಧ ದೇಶದ ಪ್ರಮುಖ ಕಾರ್ಮಿಕ ಸಂಘಟನೆಗಳು ಬಾಂಬೈಯಲ್ಲಿ ಜೂನ್ 4ರಂದು ಸಮಾವೇಶವೊಂದನ್ನು ಕರೆದಿವೆ. ಜಂಟೀ ಕಾರ್ಯಕ್ರಮವನ್ನು ರೂಪಿಸಲಿವೆ. ಎಲ್ಲ ಕೇಂದ್ರ ಕಾರ್ಮಿಕ ಸಂಘಟನೆಗಳು, ರಾಷ್ಟ್ರೀಯ ಒಕ್ಕೂಟಗಳು ಪ್ರತಿನಿಧಿಗಳನ್ನು ಕಳುಹಿಸಬೇಕೆಂದು ಕೇಂದ್ರ ಕಾರ್ಮಿಕ ಸಂಘಟನೆಗಳ ಮುಖಂಡರಾದ ಕಾಂ. ಪಿ. ರಾಮಮೂರ್ತಿ (ಸಿ.ಐ.ಟಿ.ಯು.), ಇಂದ್ರಜಿತಗುಪ್ತಾ (ಎ. ಐ. ಟಿ. ಯು. ಸಿ.), ಡಿ. ಡಿ. ವಾಶಿಷ್ಟ (ಎಚ್.ಎಂ.ಎಸ್.), ಪ್ರೇಮನಾಥ ಶರ್ಮಾ (ಬಿ.ಎಂ. ಎಸ್.), ಜೆ. ಎಸ್. ದಾರಾ (ಐ.ಎನ್.ಟಿ.ಯು.ಸಿ.), ತ್ರಿದಿಬ್ ಚೌದರಿ (ಯು. ಟಿ. ಯು. ಸಿ.), ತ್ರಿಲೇಶ್ ಚಂದ್ರ (ಯು.ಟಿ.ಯು.ಸಿ.-ಲೆನಿನ್ ಸರಣಿ), ಅಮರ ಪ್ರಸಾದ್ ಚಕ್ರವರ್ತಿ (ಟಿ.ಯು.ಸಿ.ಸಿ.) ಇವರುಗಳು ಕೋರಿದ್ದಾರೆ.

ಸರಕಾರದ ಧೋರಣೆ ಕುರಿತು ಶಕ್ತಿಯುತವಾದ ಧ್ವನಿ ಏಳುತ್ತಿರುವ ಸಂದರ್ಭ ಒದಗಿಬರುತ್ತಿದೆ. ●

ಮೈಕೋ : ಲಾಕ್‌ಔಟ್ ನಂತರದ ಪರಿಸ್ಥಿತಿ

ಏಪ್ರಿಲ್ 29ರಂದು ಮೈಕೋದಲ್ಲಿ ಲಾಕ್‌ಔಟ್‌ಘೋಷಿಸಲಾಯಿತು. (ಮೇ 3ರ ಐಕ್ಯರಂಗದಲ್ಲಿ ವಿವರ ಪ್ರಕಟವಾಗಿದೆ.) ಲಾಕ್ ಔಟ್ ಗೆ ಕಾರಣ ಹಿಂಸಾಚಾರ ನಡೆದದ್ದು ಎಂದು ಮೆನೇಜ್‌ಮೆಂಟ್ ತಿಳಿಸಿದೆ. ಆದರೆ ನಿಜವಾದ ಸಮಾಚಾರವೇನು ? ಕಾಂಗ್ರೆಗೂಂಡಾಗಳೊಟ್ಟಿಗೆ ಫ್ಯಾಕ್ಟರಿಗೆ ಆಗಮಿಸಿ ಗೊಂದಲಕ್ಕೆ ಪ್ರಚೋದಿಸಿದ ಎಫ್. ಎಂ. ಖಾನ್ ಲಾಕ್‌ಔಟ್ ಆಗಲು ಎಷ್ಟು ಕಾರಣರೋ ಅಷ್ಟೇ ಮೈಕೋ ಆಡಳಿತ ವರ್ಗವೂ ಕಾರಣ. ಏಕೆಂದರೆ ಅತ್ಯಂತ ಬಹುಮತವಿಕ ಕಾರ್ಮಿಕಸಂಘದೊಡನೆ ಸಹಕರಿಸದೆ ತಮಗೆ ಅನುಕೂಲವಾಗಬಹುದಾದ ಖಾನ್ ಬಗ್ಗೆ ಆಸ್ಥೆ ವಹಿಸಿದಂತಿದೆ.

ಏಪ್ರಿಲ್ 29ರಂದು ಗಲಭೆಯಾದ ನಂತರ ಒಳಗಿದ್ದ ಕಾರ್ಮಿಕರು ಹೊರಗೆ ಬಂದಾಗ ಕಾನೂನು ರಕ್ಷಕರ (?) ಸಮಕ್ಷಮದಲ್ಲಿ ಚಾಕು-ಚೂರಿಗಳಿಂದ ದಾಳಿ ನಡೆಸಲಾಯಿತು. "ಹೊರಗೆ ಗಲಭೆಯಾಗುತ್ತಿದೆ; ಸುರಕ್ಷಿತವಾಗಿ ಹೊರಗೆ ಮುಟ್ಟಿಸುತ್ತೇವೆ" ಎಂದು ಆಶ್ವಾಸನೆಕೊಟ್ಟು ಕಮೀಷನರ ನಿಜಾಮುದ್ದೀನರ ಭಟರು ಒಳಗಿದ್ದ ಸುಮಾರು 120 ಕಾರ್ಮಿಕರನ್ನು ವ್ಯಾನುಗಳಲ್ಲಿ ಕೊಂಡೊಯ್ದು ಬಂಧಿಸಿದರು. ಆ ಕಾರ್ಮಿಕರನ್ನು ಮರುದಿನ ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು.

ಮೇ ಎರಡರ ರಾತ್ರಿ 11 ಘಂಟೆಗೆ ಮೈಕೋ ಕಾರ್ಮಿಕಸಂಘದ ಅಧ್ಯಕ್ಷ ಕಾಂ. ಸೂರ್ಯನಾರಾಯಣರಾಯರ ಮನೆಯಲ್ಲಿ ಅವರನ್ನು ಬಂಧಿಸಲಾಯಿತು. ಬಂಧಿಸುವ ಮುನ್ನ ವಾರಂಟನ್ನೂ ತೋರಿಸಲಿಲ್ಲ. ಮರುದಿನ (ಮೇ 3) ಪೋಲೀಸ್ ಅಧಿಕಾರಿಗಳಿಗೆ ನೂರಾರು ಸಲ ಫೋನ್ ಮಾಡಿದರೂ ಕಾಂ. ಸೂರಿಯವರನ್ನು ಬಂಧಿಸಿಟ್ಟಿರುವ ಸ್ಥಳದ ಬಗ್ಗೆಯೂ ವಿವರ ತಿಳಿಸಲಿಲ್ಲ. ನಗರದಿಂದ ದೂರದಲ್ಲಿರುವ ಕಾಡುಗೊಂಡನಹಳ್ಳಿ ಠಾಣೆಯಲ್ಲಿ ಲಾಕಪ್‌ನಲ್ಲಿಡಲಾಯಿತು. ರಾಜ್ಯದ ಪ್ರಮುಖ ಕಾರ್ಮಿಕ ನಾಯಕರನ್ನು ಪೋಲೀಸರು ನಡೆಸಿಕೊಂಡ ರೀತಿ ಇದು. 4ನೇ ತಾರೀಖು ಕಾಂ. ಸೂರಿಯವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು. ಈ ಸಮಯಕ್ಕೆ ಕೋರ್ಟಿನಲ್ಲಿ ನೆರೆದಿದ್ದ ಕಾರ್ಮಿಕರಲ್ಲಿ ಇಬ್ಬರನ್ನು ಬಂಧಿಸಿದರು.

ರಾಜ್ಯದ ಪ್ರಮುಖ ಕನ್ನಡ ಮತ್ತು ಇಂಗ್ಲೀಷ್ ದಿನಪತ್ರಿಕೆಗಳು (ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಮತ್ತು ಕನ್ನಡ ಪ್ರಭ ಮುಂತಾದುವು) ಕಾಂ. ಸೂರ್ಯನಾರಾಯಣರಾವ್‌ರ ಬಂಧನವನ್ನು ಉಗ್ರವಾಗಿ ಖಂಡಿಸಿ ಸಂಪಾದಕೀಯಗಳನ್ನು ಬರೆದಿದ್ದವು ಸರಕಾರದ ಪಕ್ಷಪಾತ ಧೋರಣೆಯನ್ನು ಕಟುವಾಗಿ ಟೀಕಿಸಿದ್ದವು.

ಪ್ರತಿ ತಿಂಗಳು 3ನೇ ತಾರೀಖು ಮೈಕೋ ಕಾರ್ಮಿಕರಿಗೆ ಸಂಬಳ. ಈ ಸಲ ಲಾಕ್‌ಔಟ್ ಆಗಿದ್ದ ಕಾರಣ ಗೇಟ್ ಹತ್ತಿರವೇ ಸಂಬಳ ತೆಗೆದುಕೊಳ್ಳುವಂತೆ ಕಾರ್ಮಿಕರಿಗೆ ಸೂಚನೆಯನ್ನು ಆಡಳಿತವರ್ಗ ಕಳಿಸಿತ್ತು. ಈ ಸೂಚನೆಯ ಪ್ರಕಾರ ಸಂಬಳ ತೆಗೆದುಕೊಳ್ಳಲು ಹೋದ ಕಾರ್ಮಿಕರನ್ನು ಬಂಧಿಸಿದರು. ಈ ಮಧ್ಯೆ ಪ್ರಸಕ್ತ ಪರಿಸ್ಥಿತಿಯನ್ನು ಚರ್ಚಿಸಲು ಸರ್ವಸದಸ್ಯರ ಸಭೆ ಕರೆಯಬೇಕೆಂದರೆ ಅದಕ್ಕೂ ನಿಜಾಮುದ್ದೀನರಿಂದ ಅನುಮತಿ ದೊರೆಯಲಿಲ್ಲ.

ಮೇ 14ರಂದು ಮೈಕೋ ಆಡಳಿತವರ್ಗ ಲಾಕ್‌ಔಟ್‌ನ್ನು ತೆಗೆಯಿತು. ಕೇವಲ ಸ್ವಲ್ಪ ಜನ ಮಾತ್ರ ಸರ್ವಸದಸ್ಯರ ಸಭೆಯಲ್ಲಿ ಕಾರ್ಮಿಕರಿಂದ ಸಂಘದ್ರೋಹಿ ಚಟುವಟಿಕೆಗಳ ಕಾರಣಕ್ಕಾಗಿ ತಿರಸ್ಕೃತನಾಗಿದ್ದ ಎಫ್.ಎಂ. ಖಾನ್‌ರ ಬಲಗೈ ಬಂಟ ಪಿ. ಎಚ್. ನರಸಿಂಹಯ್ಯನ ನೇತೃತ್ವದಲ್ಲಿ ಕೆಲಸಕ್ಕೆ ಹಾಜರಾದರು. ಆದರೆ ಶೇ. 50ಕ್ಕಿಂತಲೂ ಹೆಚ್ಚು ಜನ ಕೆಲಸಕ್ಕೆ ಹಾಜರಾಗಿದ್ದಾರೆಂದು ನರಸಿಂಹಯ್ಯನ ಪತ್ರಿಕಾ ಹೇಳಿಕೆ. "ಎಫ್. ಎಂ. ಖಾನ್‌ರಿಗೆ ಕೇವಲ ಶೇ. 40ರಷ್ಟು ಬೆಂಬಲವಿದ್ದರೂ ನಾನು ಸಂಘದ ಅಧ್ಯಕ್ಷನಾಗಿ ಮುಂದುವರಿಯುವದಿಲ್ಲ"ವೆಂದು ಕಾಂ. ಸೂರ್ಯನಾರಾಯಣರಾಯರು ಸವಾಲೆಸೆದರು. ಈ ಸವಾಲನ್ನೆದುರಿಸಲು ಖಾನ್‌ರ ಪರ ಕಾರ್ಮಿಕರಿದ್ದರೆ ತಾನೆ ಸಾಧ್ಯ?

ಮೇ 16 ಮತ್ತು 18ರಂದು ಮೈಕೋ ಕಾರ್ಮಿಕ ಸಂಘದ ಸಭೆ ಸೇರಿ ಸಮಸ್ಯೆಯ ಸಾಧಕ ಬಾಧಕಗಳನ್ನು ಚರ್ಚಿಸಿ 19ನೇ ತಾರೀಖಿನಿಂದ ಕೆಲಸಕ್ಕೆ ಹಾಜರಾಗಲು ಕಾರ್ಮಿಕರಿಗೆ ಕರೆಕೊಟ್ಟಿದೆ.

ಈ ಅವಧಿಯ ಸಂಘದ ಪದಾಧಿಕಾರಿಗಳನ್ನೊಳಗೊಂಡು ಸುಮಾರು 40 ಜನ ಕಾರ್ಮಿಕರನ್ನು ಆಡಳಿತ ವರ್ಗ ಡಿಸ್‌ಮಿಸ್ ಮಾಡಿದೆ. ಸುಮಾರು 50ಕ್ಕೂ ಮೇಲ್ಪಟ್ಟು ಕಾರ್ಮಿಕರನ್ನು ಗಲಭೆಯಲ್ಲಿ ಭಾಗಿಯಾಗಿದ್ದೀರೆಂದ ಕಾರಣ ತೋರಿಸಿ ಸಸ್ಪೆಂಡ್ ಮಾಡಿದ್ದಾರೆ. ಸಸ್ಪೆಂಡ್ ಆದ ಕಾರ್ಮಿಕರಲ್ಲನೇಕರು ಏಪ್ರಿಲ್ 29ರಂದು ಕೆಲಸಕ್ಕೆ ಹೋಗಿರಲಿಲ್ಲ.

ತಕ್ಷಣ ಚುನಾವಣೆ ನಡೆಸಬೇಕು. ಡಿಸ್‌ಮಿಸ್ ಮತ್ತು ಸಸ್ಪೆಂಡ್ ಆಜ್ಞೆಗಳನ್ನು ತಕ್ಷಣ ವಾಪಸ್ ಪಡೆಯಬೇಕು ಎಂದು ಕಾಂ. ಸೂರ್ಯನಾರಾಯಣರಾಯರು ಒತ್ತಾಯಿಸಿದ್ದಾರೆ.

ಪರಿಸ್ಥಿತಿ ಪ್ರತಿಕೂಲವಿದ್ದಾಗ್ಯೂ ರಾಯರ ನೇತೃತ್ವ ಸರಕಾರದ ಧೋರಣೆಯ ವಿರುದ್ಧ, ಎಫ್. ಎಂ. ಖಾನ್ ನೇತೃತ್ವದ ಸಮಾಜದ್ರೋಹಿ ಗೂಂಡಾಗಳ ವಿರುದ್ಧ, ಪೋಲೀಸ್ ಕಮೀಷನರ್ ನಿಜಾಮುದ್ದೀನರ ಪಕ್ಷಪಾತದ, ಸರ್ವಾಧಿಕಾರಿ ಧೋರಣೆಯ ವಿರುದ್ಧ ಮೈಕೋ ಕಾರ್ಮಿಕರು ಛಲದಿಂದ ಹೋರಾಡುತ್ತಿದ್ದಾರೆ. ●

ರಾಜ್ಯದಾದ್ಯಂತ ಸಂಭ್ರಮದ ಮೇ ದಿನಾಚರಣೆ

ಬೆಂಗಳೂರು

ಸತತವಾದ ಸಂಯುಕ್ತ ಕ್ರಿಯಾ ಚಳುವಳಿಗಳು ಮತ್ತು ಸೈದ್ಧಾಂತಿಕ ಹೋರಾಟಗಳ ಫಲವಾಗಿ ಕಾರ್ಮಿಕ ವರ್ಗಕ್ಕೆ ಪರಕೀಯವಾದ ಸೈದ್ಧಾಂತಿಕ ನಿಲುವುಗಳನ್ನು ಸೋಲಿಸುವ ಮೂಲಕ ದೇಶದ ಪುರೋಗಾಮಿ ಶಕ್ತಿಗಳು ವೃದ್ಧಿಯಾಗಲು ಸಾಧ್ಯ. ರಾಜ್ಯದಲ್ಲಿ ಈ ದಿಕ್ಕಿನಲ್ಲಿ ಇಟ್ಟ ಪ್ರಥಮ ಹೆಜ್ಜೆ ಬೆಂಗಳೂರಿನಲ್ಲಿ ಜಂಟಿಯಾಗಿ ನಡೆದ ಮೇ ದಿನಾಚರಣೆ.

ಮೇ ದಿನಾಚರಣೆಯನ್ನು ಜಂಟಿಯಾಗಿ ಈ ಬಾರಿ ಆಚರಿಸಬೇಕೆಂದು ಸಂಕಲ್ಪಿಸಿ ಪೂರ್ವಭಾವಿಯಾಗಿಯೇ ಸಿದ್ಧತೆಗಳು ನಡೆದಿದ್ದವು.

ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಚ್.ಎಂ.ಎಸ್., ಜೆ.ಎ.ಎಫ್. ಬ್ಯಾಂಕ್ ನೌಕರರ ಸಂಘ, ಜೀವವಿಮಾ ಕೆಲಸಗಾರರ ಸಂಘ, ರಕ್ಷಣಾ ಕೆಲಸಗಾರರ ಸಂಘ, ರಾಜ್ಯ ಸರಕಾರಿ ನೌಕರರ ಸಂಘ ಮೊದಲಾದ ಸಂಘಟನೆಗಳ ಜಂಟಿ ನೇತೃತ್ವದಲ್ಲಿ ಈ ಸಲ ಮೇ ದಿನ ಆಚರಿಸಲ್ಪಟ್ಟಿತು.

ನಗರದ ವಿವಿಧ ಭಾಗಗಳಿಂದ ಕಾರ್ಮಿಕರು ಸಾಗರದಂತೆ ಕಬ್ಬನ್ ಪಾರ್ಕ್‌ಗೆ ಧಾವಿಸಿದ್ದರು. ನಗರದಲ್ಲೆಲ್ಲ ಬೃಹತ್ ಮೆರವಣಿಗೆ ಹೊರಡಿಸಲಾಗಿತ್ತು. ಕಬ್ಬನ್ ಪಾರ್ಕಿನಲ್ಲಿ ನಡೆದ ಬೃಹತ್ ಸಭೆಯ ಅಧ್ಯಕ್ಷತೆಯನ್ನು ಎಚ್. ಎಂ. ಎಸ್.ನ ಡಿ. ರಾಜಗೋಪಾಲರು ವಹಿಸಿದ್ದರು. ಸಭೆಯನ್ನುದ್ದೇಶಿಸಿ ಸಿ.ಐ.ಟಿ.ಯು.ವಿನ ಕಾಂ. ಎಸ್. ಸೂರ್ಯನಾರಾಯಣ ರಾವ್, ಕಾಂ. ವಿ.ಜೆ.ಕೆ. ನಾಯರ್, ಎ.ಐ.ಟಿ.ಯು.ಸಿ.ಯ ಕಾಂ. ಬಾಬೂ ಮ್ಯಾಥ್ಯೂ ಮೊದಲಾದವರು ಮಾತನಾಡಿದರು. ವಿವಿಧ ಅಂತರಾಷ್ಟ್ರೀಯ ವಿದ್ಯಾರ್ಥಿ ಗುಂಪುಗಳು ಕಾರ್ಮಿಕರಿಗೆ ಮೇದಿನದ ನಿಮಿತ್ತ ಶುಭಕೋರಿದರು. "ಸಮುದಾಯ" ತಂಡದವರಿಂದ ಕ್ರಾಂತಿಕಾರಿ ಗೀತೆಗಳು, ನಾಟಕ ಕಾರ್ಯಕ್ರಮ ನಡೆಯಿತು.

ಮಂಗಳೂರು

ಎಲ್ಲೆಡೆ ಕೆಂಬಾವುಟಗಳಿಂದ ಶೋಭಿಸುತ್ತಿದ್ದ ಮಂಗಳೂರು ನಗರ ಈಸಲ ಮೇದಿನವನ್ನು ವಿಜೃಂಭಣೆಯಿಂದ ಆಚರಿಸಿತು.

ಮಧ್ಯಾಹ್ನ 3 ಘಂಟೆಯಿಂದಲೇ ವಿವಿಧ ಕಾರ್ಖಾನೆಗಳ ಕಾರ್ಮಿಕರು ಮೆರವಣಿಗೆಯಲ್ಲಿ ಹೊರಟು ನೆಹರೂ ಮೈದಾನವನ್ನು ಸೇರಿದರು. ಮೆರವಣಿಗೆಯ ನೇತೃತ್ವವನ್ನು ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ.ಗಳು ವಹಿಸಿದ್ದವು.

ಸಂಜೆ 6 ಘಂಟೆಗೆ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಕೆ. ಆರ್. ಶ್ರೀಯಾನ್ ಮಾತನಾಡಿ ಮೇ ದಿನದ ಮಹತ್ವವನ್ನು ವಿವರಿಸಿದರು. ಸಭಾಧ್ಯಕ್ಷತೆಯನ್ನು ಎ.ಐ.ಟಿ.ಯು.ಸಿ.ಯ ಕಾಂ. ಕೆ. ಮೋನಪ್ಪಶೆಟ್ಟರು ವಹಿಸಿದ್ದರು. ನಂತರ ಕಾಂ. ಪಿ. ರಾಮಚಂದ್ರರಾವ್ ಮತ್ತು ಕಾಂ. ಬಿ. ವಿ. ಕಕ್ಕಿಲ್ಲಾಯರು ಕಾರ್ಮಿಕ ವರ್ಗದ ಮುಂದಿರುವ ಮಹತ್ತಾದ ಜವಾಬ್ದಾರಿ ಕುರಿತು ಮಾತನಾಡಿದರು. ಕೊನೆಗೆ ಕಾಂ. ಉಮಾನಾಥರು ವಂದನಾರ್ಪಣೆ ಮಾಡಿದರು. ಪುತ್ತೂರು ಸಮುದಾಯದವರಿಂದ ನಾಟಕ ಕಾರ್ಯಕ್ರಮವೂ ನಡೆಯಿತು.

ಮೈಸೂರು

ಮೈಸೂರು ನಗರದಲ್ಲಿ ಮೊದಲ ಬಾರಿಗೆ ಈ ಸಾರಿ ಮೇ ದಿನಾಚರಣೆಯನ್ನು ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ. ಮತ್ತು ಜೀವವಿಮಾ ನಿಗಮದ ನೌಕರರ ಸಂಘದವರು ಸೇರಿ ಜಂಟಿಯಾಗಿ ಆಚರಿಸಿದರು. ವಾದ್ಯ, ವೇಷಗಳು, ಕೆಂಪು ಸಮವಸ್ತ್ರಧರಿಸಿ ಕೆಂಬಾವುಟ ಹಿಡಿದು ನಡೆದ ಮೆರವಣಿಗೆ ಆಕರ್ಷಕವಾಗಿತ್ತು. ಸಂಜೆ ಪುರಭವನದ ಮೈದಾನದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಎಂ.ಎನ್. ಉಗ್ರಪ್ಪ, ಸೋಮಸುಂದರ ಶರ್ಮ ಇವರುಗಳು ಮಾತನಾಡಿದರು. ಕಾಂ. ರೆಹಮಾನ್‌ರು ಅಧ್ಯಕ್ಷತೆ ವಹಿಸಿದ್ದರು. ಕಾಂ. ವೆಂಕಟರಾಮ್‌ರವರು ಸ್ವಾಗತ ಬಯಸಿದರು ಮತ್ತು ಕಾಂ. ಎಂ. ಶೇಖರ ವಂದನಾರ್ಪಣೆ ಮಾಡಿದರು.

ಮೇ ಒಂದರಂದು ಸಂಬಳ ಸಹಿತ ರಜಾಕೊಡಬೇಕೆಂಬ ತಮ್ಮ ಬೇಡಿಕೆಯನ್ನು ಆಡಳಿತವರ್ಗವು ನಿರಾಕರಿಸಿದ್ದನ್ನು ಪ್ರತಿಭಟಿಸಿ ನಗರದ ವಿಕ್ರಾಂತ ಟೈರ್ಸ್‌ನ ಕಾರ್ಮಿಕರು ಮುಷ್ಕರ ನಡೆಸಿದರು. ಕಾರ್ಮಿಕರನ್ನು ಉದ್ದೇಶಿಸಿ ಕಾಂ. ಎಂ. ಎನ್. ಉಗ್ರಪ್ಪ ಮೊದಲಾದವರು ಮಾತನಾಡಿ ಬೆಂಬಲ ಸೂಚಿಸಿದರು.

ಹುಬ್ಬಳ್ಳಿ

ಹುಬ್ಬಳ್ಳಿಯ "ನಗರ ಕಾರ್ಮಿಕ ಸಂಘವು" ಇಂಡಸ್ಟ್ರಿಯಲ್ ಎಸ್ಟೇಟ್‌ನಲ್ಲಿ ಸಂಜೆ 5 ಗಂಟೆಗೆ ಬಹಿರಂಗ ಸಭೆಸೇರಿ ಮೇದಿನವನ್ನು ಆಚರಿಸಿದರು.

ಕಾಂ. ಎಂ. ಸದಾನಂದರು ಮೇ ದಿನದ ಐತಿಹಾಸಿಕ ಹಿನ್ನೆಲೆಯನ್ನು, ಹುಬ್ಬಳ್ಳಿಯಲ್ಲಿ ಸಿ.ಐ.ಟಿ.ಯು.ವಿನ ಬೆಳವಣಿಗೆಯ ಬಗ್ಗೆ ಮಾತನಾಡಿದರು. ಕಾಂ. ಜೈತೀರ್ಥಕುಲಕರ್ಣಿಯವರು ಮಾತನಾಡಿ ರಾಜ್ಯಸರಕಾರದ ಕಾರ್ಮಿಕವಿರೋಧಿ ಧೋರಣೆಯನ್ನು ಖಂಡಿಸಿದರು.

ರಾಯಚೂರು

ಕಾರ್ಮಿಕಸಂಘಗಳ ಸಮನ್ವಯ ಸಮಿತಿಯ ಕರೆಯ ಮೇರೆಗೆ ರಾಯಚೂರಿನ ಕಾರ್ಮಿಕರು ಮೇದಿನವನ್ನಾಚರಿಸಿದರು. ಅಂದು ಸಂಜೆ ಸಿ.ಐ.ಟಿ.ಯು. ಆಫೀಸಿನಿಂದ ಮೆರವಣಿಗೆ ಹೊರಟು ಕಾತೀದರವಾಜ್‌ದಲ್ಲಿ ಬಹಿರಂಗ ಸಭೆಯನ್ನು ನಡೆಸಲಾಯಿತು. ಕಾಂ. ಖಮರುದ್ದೀನ ಸಭೆಯ ಅಧ್ಯಕ್ಷತೆಯನ್ನು ವಹಿಸಿದ್ದರು.

ವಿವಿಧ ಸಂಘಟನೆಗಳಿಗೆ ಸೇರಿದ ಕಾಂ.ರಾಮಕೃಷ್ಣ, ಅಜಯ್‌ಕುಮಾರ್, ಹನುಮಂತಪ್ಪ ಪ್ರಲ್ಹಾದಾಚಾರ್, ಎಂ. ನಾಗಪ್ಪ ಮೊದಲಾದವರು ಮಾತನಾಡಿ ಶ್ರಮಿಕವರ್ಗದವರು ಕೆಂಬಾವುಟದಡಿಯಲ್ಲಿ ಸಂಘಟಿತರಾಗಿ ತಮ್ಮ ಹಕ್ಕುಗಳಿಗಾಗಿ ಹೋರಾಡಬೇಕಾದ ಅಗತ್ಯತೆಯ ಬಗ್ಗೆ ತಿಳಿಸಿದರು.

ದಾಂಡೇಲಿ

ದಾಂಡೇಲಿಯ ಮುನಿಸಿಪಾಲಿಟಿ ಸಭಾಂಗಣದಲ್ಲಿ ಕಾರ್ಮಿಕರು ಮೇ ದಿನವನ್ನಾಚರಿಸಿದರು. ಸಭೆಗೆ ಮುಖ್ಯ ಅತಿಥಿಗಳಾಗಿ ಜಿಲ್ಲಾ ರೈತಸಂಘದ ಕಾರ್ಯಕರ್ತ ಕಾಂ. ಮಹಾಬಳೇಶ್ವರ ಪವಾರ ಆಗಮಿಸಿದ್ದರು. ಸಭೆಯ ಅಧ್ಯಕ್ಷತೆಯನ್ನು ಕಾಂ. ಆರ್. ಜಿ. ಸ್ಥಳೇಕರ್ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ಜನ್ನು ಸ್ವಾಗತಿಸಿದರು. ಕಾಂ. ಭಾಸ್ಕರನಾಯ್ಕರು ಕ್ರಾಂತಿ ಗೀತೆ ಹಾಡಿದರು.

ಇದೇ ಸಂದರ್ಭದಲ್ಲಿ ಇತ್ತೀಚೆಗೆ ಅಗಲಿದ ಕಾರ್ಮಿಕ ನಾಯಕ, ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮುಖಂಡ ಕಾಂ. ಜಿ.ವಿ. ಪವಾರ್‌ರ ಕುಟುಂಬಕ್ಕೆ ಸಂಗ್ರಹಿಸಿದ ಪರಿಹಾರ ನಿಧಿಯನ್ನು ಅರ್ಪಿಸಲಾಯಿತು. ಕಾಂ. ಜಿ. ವಿ. ಪವಾರ್ ಮೆಮೋರಿಯಲ್ ಸಮಿತಿ ರೂ. 48,000 ಸಂಗ್ರಹಿಸಿತ್ತು. ಈ ಹಣವನ್ನು ಕಾಂ. ಪವಾರರ ಪತ್ನಿ ಕಾಂ. ಸುಶೀಲಾ ಪವಾರರಿಗೆ, ಕಾಂ. ಮಹಾಬಳೇಶ್ವರ ಪವಾರರು ಅರ್ಪಿಸುತ್ತಾ ಕಾಂ. ಪವಾರರ ಹೋರಾಟದ ಜೀವನವನ್ನು ಕುರಿತು ಮಾತನಾಡಿದರು.

ಕಾಂ. ಸ್ಥಳೇಕರರು ಪ್ರಚಲಿತ ರಾಜಕೀಯ ಪರಿಸ್ಥಿತಿ ಕುರಿತು ಮಾತನಾಡಿದರು.

ಕಾಂ. ಜಿ. ವಿ. ಪವಾರ ಮೆಮೋರಿಯಲ್ ಸಮಿತಿಯನ್ನು 1-5-1981 ರಂದು ವಿಸರ್ಜಿಸಿ ಇನ್ನೂ ಯಾರು ಹಣ ತಲುಪಿಸಿಲ್ಲವೋ ಅವರು ಶ್ರೀಮತಿ ಪವಾರರ ಹೆಸರಿಗೆ ಹಣ ಕಳಿಸಬೇಕೆಂದು ಕೋರಲಾಯಿತು.

ಸಕಲೇಶಪುರ

ಮೇ ದಿನಾಚರಣೆಯ ಅಂಗವಾಗಿ ಸಕಲೇಶಪುರದಲ್ಲಿ ತೋಟ ಕಾರ್ಮಿಕರು ಸಿ.ಐ.ಟಿ.ಯು. ನೇತೃತ್ವದಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆಯ ನೇತೃತ್ವವನ್ನು ಕಾಂ. ಪಾಲ್ ಡಿಸೋಜಾ ಮತ್ತು ಕಾಂ. ದೂಜ ವಹಿಸಿದ್ದರು. ನಂತರ ಕರ್ನಾಟಕ ತೋಟಕಾರ್ಮಿಕರ ಸಂಘದ ಕಛೇರಿಯ ಆವರಣದಲ್ಲಿ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ರಾಜ್ಯ ಸಿ.ಐ.ಟಿ.ಯು. ರಾಜ್ಯಸಮಿತಿಯ ಸದಸ್ಯ ಕಾಂ. ವಿ. ಸುಕುಮಾರ್ ಅವರು ಮೇ ದಿನದ ಮಹತ್ವ ಕುರಿತು ಮಾತನಾಡಿದರು.

ಶಿರ್ಸಿ

ಕಾರವಾರ ಜಿಲ್ಲೆಯ ಶಿರಸಿಯ ಕಿಡ್ಕಿಬೈಲ್‌ನಲ್ಲಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕಾರ್ಯದರ್ಶಿ ಕಾಂ. ಮಂಜುನಾಥ ಪುಲಕರ ಇವರ ಅಧ್ಯಕ್ಷತೆಯಲ್ಲಿ ಮೇ ದಿನಾಚರಣೆ ಪ್ರಯುಕ್ತ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಹಾನಗಲ್ ತಾಲ್ಲೂಕು ರೈತ ಮುಖಂಡ ಪಕೀರಪ್ಪ ಮೊದಲಾದವರು ಮಾತನಾಡಿದರು. ಕಾಮ್ರೇಡ್ ಮಂಜುನಾಥ ಪುಲಕರರು ರಾಜ್ಯ ಸರಕಾರದ ಕಾರ್ಮಿಕ ವಿರೋಧಿ ಧೋರಣೆ ಖಂಡಿಸುತ್ತಾ, ಕೇರಳ, ಬಂಗಾಲ ಮತ್ತು ತ್ರಿಪುರಾ ಸರ್ಕಾರಗಳ ಸಾಧನೆ ಕುರಿತು ವಿವರಿಸಿದರು.

ಕೊನೆಗೆ ಶಿರ್ಸಿ ರೆವಿನ್ಯೂ ವಿಭಾಗಕ್ಕೆ ಒಂದು ಉದ್ಯೋಗ ವಿನಿಮಯ ಕಛೇರಿ ತೆಗೆಯಬೇಕೆನ್ನುವ ಠರಾವು ಸ್ವೀಕರಿಸಲಾಯಿತು.

ಕುಣಿಗಲ್

ಮೇ ದಿನಾಚರಣೆಯ ಅಂಗವಾಗಿ 3-5-1981ರಂದು ಕುಣಿಗಲ್‌ನ ಮಾರ್ಕ್ಸ್‌ವಾದೀ ಕಮ್ಯುನಿಸ್ಟ್ ಪಕ್ಷದ ಆಫೀಸಿನಲ್ಲಿ ಕಾರ್ಮಿಕರ ಸಭೆ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಕಾಂ. ಸಲೀಮಾ ಬೇಗಂ ವಹಿಸಿದ್ದರು. ಸಭೆಯನ್ನುದ್ದೇಶಿಸಿ ಕಾಂ. ಮಹಮ್ಮದ್ ದಸ್ತಗೀರ, ಅಂಜಪ್ಪ, ಬಿ. ಜಿ. ಗಂಗಾಧರಯ್ಯ ಮೊದಲಾದವರು ಕಾರ್ಮಿಕ ಚಳುವಳಿ ಕುರಿತು ಮಾತನಾಡಿದರು ಕಾಂ. ಏಸುದಾಸ್‌ರ ಕ್ರಾಂತಿಗೀತೆಗಳ ನಂತರ ಸಭೆ ಮುಕ್ತಾಯವಾಯಿತು.

ಕುಂದಾಪುರ

ದ. ಕ. ಜಿಲ್ಲೆಯ ಕುಂದಾಪುರದಲ್ಲಿ ಸಿ.ಐ.ಟಿ.ಯು.ಗೆ ಸೇರಿದ ಕಾರ್ಮಿಕ ಸಂಘಗಳ ನೇತೃತ್ವದಲ್ಲಿ ಮೇ ದಿನವನ್ನು ಸಂಭ್ರಮದಿಂದ ಆಚರಿಸಲಾಯಿತು.

ಕೃಷಿ ಕೂಲಿಕಾರರು ಮತ್ತು ಕಾರ್ಮಿಕರು ಹೆಚ್ಚಿನ ಸಂಖ್ಯೆಯಲ್ಲಿ ದೂರದ ಪ್ರದೇಶಗಳಾದ ಗುಲ್ವಾಡಿ, ನೆಲ್ಲಿಕಟ್ಟೆ, ಗಂಗೊಳ್ಳಿ ಮತ್ತು ಪಡುಕೋಣೆಗಳಿಂದ ಮೆರವಣಿಗೆಯಲ್ಲಿ ಆಗಮಿಸಿದ್ದರು.

ಸಂಜೆ 6 ಗಂಟೆಗೆ ಗಾಂಧೀ ಮೈದಾನದಲ್ಲಿ ಜರುಗಿದ ಸಾರ್ವಜನಿಕ ಸಭೆಯನ್ನುದ್ದೇಶಿಸಿ ರೈತ-ಕಾರ್ಮಿಕರ ಮುಂದಾಳುಗಳಾದ ಕಾಂ. ಅಬ್ರಹಾಂ ಕರ್ಕಡ, ಕೆ. ಶಂಕರ್ ಅವರು ಮೇ ದಿನದ ಮಹತ್ವವನ್ನು ಕುರಿತು ಮಾತನಾಡಿದರು. ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಹೋರಾಡಲು ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಒಕ್ಕೂಟವನ್ನು ಬೆಳೆಸಲು ಶ್ರಮಿಸಬೇಕೆಂದರು.

ಸಭೆಯ ಅಧ್ಯಕ್ಷತೆಯನ್ನು ಕಾಂ. ಸಿ. ನಾರಾಯಣ ವಹಿಸಿದ್ದರು. ಪ್ರಾರಂಭದಲ್ಲಿ ಕಾಂ. ದಾಸ್ ಭಂಡಾರಿ ಸ್ವಾಗತಿಸಿದರು.

ತುಮ್ಮಿನಕಟ್ಟೆ

ರಾಣಿಬೆನ್ನೂರ ತಾಲೂಕಿನ ತುಮ್ಮಿನಕಟ್ಟೆಯಲ್ಲಿ ಕಾರ್ಮಿಕರು ಮೇ ದಿನವನ್ನು ಆಚರಿಸಿದರು. ನೇಕಾರ ಕಾರ್ಮಿಕರು, ಬೀಡಿ ಕೆಲಸಗಾರರು, ಕೃಷಿಕೂಲಿಕಾರರು ಮೊದಲಾದವರು ಸೇರಿ ಕಾಂ. ವಿ. ಎನ್. ಹಳಕಟ್ಟಿಯವರ ನೇತೃತ್ವದಲ್ಲಿ ಮೆರವಣಿಗೆ ಹೊರಡಿಸಿದ್ದರು. ನಂತರ ಮಾರ್ಕಂಡೇಶ್ವರ ದೇವಸ್ಥಾನದಲ್ಲಿ ಬಹಿರಂಗ ಸಭೆ ನಡೆಯಿತು.

ಸಭೆಯನ್ನುದ್ದೇಶಿಸಿ ಕಾಂ. ವಿ. ಎನ್. ಹಳಕಟ್ಟಿ, ಫಕೀರಪ್ಪ ವಿಭೂತಿ, ಎಸ್. ಎಫ್. ಕ್ಯಾದಗಿ, ಸೈಯದ್ ಪೀರ್ ಸಾಹೇಬ್ ಮೊದಲಾದ ಮುಖಂಡರು ಮಾತನಾಡಿದರು. ಸಭೆಯ ಅಧ್ಯಕ್ಷತೆಯನ್ನು ದೇವರೆಡ್ಡಿಯವರು ವಹಿಸಿದ್ದರು'

ಚೆಟ್ಟಳ್ಳಿ

ಕೊಡಗು ಜಿಲ್ಲೆಯ ಚೆಟ್ಟಳ್ಳಿಯಲ್ಲಿ ಸಿ.ಐ.ಟಿ.ಯು. ಆಶ್ರಯದಲ್ಲಿ ಮೇ ದಿನಾಚರಣೆಯ ನಿಮಿತ್ತ ಬಹಿರಂಗ ಸಭೆ ನಡೆಯಿತು. ಸಭೆಯನ್ನುದ್ದೇಶಿಸಿ ಕಾಂ. ಎಸ್. ಆರ್. ಅಪ್ಪಣ್ಣ, ಪಿ. ವೀರಸ್ವಾಮಿ, ದಿವಾಕರನ್, ಎನ್.ಡಿ. ಕುಟ್ಟಪ್ಪನ್ ಮತ್ತು ಕಾಂ. ಪಿ. ಕೆ. ಲತೀಪ್ ಮುಂತಾದವರು ಮೇ ದಿನದ ಮಹತ್ವ ಕುರಿತು ಮಾತನಾಡಿದರು.

ಕಾರ್ಕಳ

ದ.ಕ. ಜಿಲ್ಲೆಯ ಕಾರ್ಕಳದ ಕಾರ್ಬೆಟ್ಟನಲ್ಲಿ ಮೇ ದಿನಾಚರಣೆಯನ್ನು ನಡೆಸಲಾಯಿತು. ಕಾಂ. ವಿ. ಎಂ. ಚಿನ್ನಸ್ವಾಮಿ ಧ್ವಜಾರೋಹಣ ಮಾಡಿದರು. ನಂತರ ಕಾಂ. ದಿವಾಕರ ಇವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ನಂತರ ಪಕ್ಕದ ಕುಕ್ಕುಂದೂರ ಗ್ರಾಮಕ್ಕೆ ಸೈಕಲ್ ಮೇಲೆ ಮೆರವಣಿಗೆಯಲ್ಲಿ ತೆರಳಿ ಬಹಿರಂಗ ಸಭೆ ನಡೆಸಲಾಯಿತು.

ಪುತ್ತೂರು

ದ. ಕ. ಜಿಲ್ಲೆಯ ಪುತ್ತೂರಿನಲ್ಲಿ ಪ್ರತಿಸಲದಂತೆ ಈ ಸಲವೂ ಕಾರ್ಮಿಕ ಕ್ರಿಯಾವೇದಿಕೆಯ ಆಶ್ರಯದಲ್ಲಿ ಮೇ ದಿನಾಚರಣೆಯನ್ನು ಅದ್ದೂರಿಯಿಂದ ಆಚರಿಸಲಾಯಿತು. ಸಭೆಯ ಅಧ್ಯಕ್ಷತೆಯನ್ನು ಕಾರ್ಮಿಕ ಕ್ರಿಯಾವೇದಿಕೆಯ ಸಂಚಾಲಕ ಕಾಂ. ವಿಲಿಯಂ ರೊಡ್ರಿಗಸ್ ಅವರು ವಹಿಸಿದ್ದು, ಮುಖ್ಯ ಅತಿಥಿಗಳಾಗಿ ಹಿರಿಯ ಸ್ವಾತಂತ್ರ್ಯ ಹೋರಾಟಗಾರ ಕಾಂ. ಪರಮೇಶ್ವರ ನಂಬೀಶನ್‌ರವರು ಆಗಮಿಸಿದ್ದರು.

ಈ ಮೇಲಿನ ವರದಿಗಳಲ್ಲದೆ ಹಾಸನ, ತಿಪಟೂರು, ಹರಿಹರ, ಶಾಬಾದ್, ಶಿಡ್ಲಘಟ್ಟ ಮೊದಲಾದ ಕಡೆಯಿಂದ ಮೇ ದಿನಾಚರಣೆ ಆಚರಿಸಿದ ವರದಿ ಬಂದಿವೆ. ●

ಹಳೆಯ ಜನಸಂಘದ ಶಿಶುವಾದ ಭಾರತೀಯ ಜನತಾಪಕ್ಷವು ಕಾಂಗ್ರೆಸ್ (ಐ)ಗೆ ತಾನು ಮಾತ್ರ ಏಕೈಕ 'ರಾಷ್ಟ್ರೀಯ ಪರ್ಯಾಯ' ಎಂದು ಕರ್ಕಶವಾಗಿ ಬೊಬ್ಬಿಡುತ್ತಾ ದೇಶಾದ್ಯಂತ ಪ್ರಚಾರ ನಡೆಸುತ್ತಿದೆ. ಇದರ ಈ ಒಡ್ಡೊಡ್ಡಾದ ಆಲಾಪಕ್ಕೆ ಏಕಸ್ವಾಮ್ಯವಾದೀ ದೊಡ್ಡ ಪತ್ರಿಕೆಗಳು ತಮ್ಮ ಸ್ವಾರ್ಥಸಾಧನೆಗಾಗಿ ತಾಳ ಹಾಕುತ್ತಿವೆ. ಬಿ. ಜೆ. ಪಿ. ಯನ್ನು ಹಾಗೂ ಅದರ ನಾಯಕ ವಾಜಪೇಯಿಯವರನ್ನು ಯದ್ವಾತದ್ವಾ ಮೆರೆಯಿಸುತ್ತಿವೆ.

ಇತ್ತೀಚೆಗೆ ಕೇರಳದ ಕೊಚ್ಚಿಯಲ್ಲಿ ನಡೆದ ಬಿ.ಜೆ.ಪಿ.ಯ ರಾಷ್ಟ್ರೀಯ ಪರಿಷತ್ತಿನ ಅಧಿವೇಶನದ ಬಗ್ಗೆ ಹೇಳುತ್ತಾ ಶ್ರೀ ಎಲ್. ಕೆ. ಅದ್ವಾನಿಯವರು "ನಮ್ಮ ಸಂಘಟನಾತ್ಮಕ ಶಕ್ತಿ ದಕ್ಷಿಣಕ್ಕೂ ಚಾಚುತ್ತಿದೆ...ಆದ್ದರಿಂದಲೇ ಕೊಚ್ಚಿಯಲ್ಲಿ ನಮ್ಮ ರಾಷ್ಟ್ರೀಯ ಪರಿಷತ್ತಿನ ಅಧಿವೇಶನವನ್ನು ನಡೆಸಲು ನಿರ್ಧರಿಸಿದ್ದು" ಎಂದಿದ್ದಾರೆ. ತಮ್ಮ 'ರಾಷ್ಟ್ರವ್ಯಾಪೀ' ತನವನ್ನು ಪ್ರದರ್ಶಿಸುವುದಕ್ಕಾಗಿ ಕೇರಳವನ್ನು ಆರಿಸಿಕೊಳ್ಳಲಾಯಿತು ಎಂದು ಕೆಲವರು ಭಾವಿಸಿರಬಹುದು. ಆದರೆ

ಬಿ.ಜೆ.ಪಿ. ಮತ್ತು ಆರ್. ಎಸ್. ಎಸ್.

'ಪರ್ಯಾಯ'ದ ಗುಂಪಿನಲ್ಲಿರುವ ಬಿ.ಜೆ.ಪಿ.ಯ ರಾಜಕೀಯ ಸರಕನ್ನು ಮಾರಲು ಉತ್ತಮ ಸೇಲ್ಸ್‌ಮನ್–ಭಾಷಣ ಕಲೆಯನ್ನು ಕರಗತಮಾಡಿ ಕೊಂಡಿರುವ ವಾಜಪೇಯಿಯವರು ಮತ್ತು ಅದಕ್ಕೆ ಸಂಘಟನಾತ್ಮಕ ಬಲ ಕೊಡುವವರು ಹಿಂಸೆ ಹಾಗೂ ಕೋಮುವಾದೀ ದ್ವೇಷದ ಇತಿಹಾಸವನ್ನೇ ಹೊಂದಿರುವ ಆರ್. ಎಸ್. ಎಸ್., ಆರ್.ಎಸ್.ಎಸ್.ನೊಡನೆ ತಮಗೇನೂ ಸಂಬಂಧವಿಲ್ಲವೆಂಬಂತೆ ಬಿ.ಜೆ.ಪಿ.ಯವರು ಈಗಲೂ ನಡೆಸುತ್ತಿದ್ದಾರೆ. ಆದರೆ ರಾಜಕೀಯ ಪ್ರಜ್ಞೆಯಿರುವ ಯಾವುದೇ ಭಾರತೀಯನಿಗೆ ಈ ಬಗ್ಗೆ ವಿವರಿಸುವ ಅಗತ್ಯವಿಲ್ಲ. ಆರ್.ಎಸ್.ಎಸ್.ನ ಸಂಕುಚಿತ ಕೋಮುವಾದದ ಬಗ್ಗೆಯೂ ಹೇಳಬೇಕಾಗಿಲ್ಲ. ಆರ್.ಎಸ್.ಎಸ್. ಒಂದು ಸಾಂಸ್ಕೃತಿಕ ಸಂಘಟನೆಯೆಂದು ಎಲ್ಲರೂ ನಂಬಬೇಕೆಂದು ಬಿ.ಜೆ.ಪಿ. ನಾಯಕರ ಹಠ. ಆದರೆ ಕಮ್ಯೂನಿಸ್ಟರು ತಮ್ಮ ಐವತ್ತು ವರ್ಷಕ್ಕೂ ಮಿಕ್ಕಿದ ಕಾರ್ಯಚಟುವಟಿಕೆಯ ಅವಧಿಯಲ್ಲಿ ಆರ್.ಎಸ್.ಎಸ್. ನ್ನು ರಾಜಕೀಯವಾಗಿ ಮತ್ತು ಸೈದ್ಧಾಂತಿಕವಾಗಿಯೇ ಎದುರಿಸಿದ್ದಾರೆ.

ಆಶ್ಚರ್ಯವೇನಿಲ್ಲ. ಪಶ್ಚಿಮ ಬಂಗಾಲದಲ್ಲಿ ಕಾಂಗ್ರೆಸ್(ಐ)ನ ಛಾತ್ರ ಪರಿಷತ್ ಹಾಗೂ ಯುವ ಕಾಂಗ್ರೆಸ್ ಮಾಡುವುದನ್ನು ಕೇರಳದಲ್ಲಿ ಆರ್. ಎಸ್.ಎಸ್. ಮಾಡುತ್ತಿದೆ.

ಅದೇ ವರದಿಗಾರ ಇನ್ನೊಂದೆಡೆ ಬಿ.ಜೆ.ಪಿ. ಕಾರ್ಯಕರ್ತರು ಮಾರುಕಟ್ಟೆ ಸ್ಥಳಗಳಲ್ಲಿ ಕಾಣಿಸಿಕೊಳ್ಳಲಾರಂಭಿಸಿದ್ದಾರೆ. ವ್ಯಾಪಾರಸ್ಥರಿಂದ, ಜನಸಾಮಾನ್ಯರಿಂದ ಹಣ ಕಿತ್ತುಕೊಳ್ಳುವ ಲೈಸೆನ್ಸ್‌ರಹಿತ 'ಹೆಡ ಲೋಡರ್' ಗಳನ್ನು ಎದುರಿಸುತ್ತಿದ್ದಾರೆ. ಕುಟ್ಟನಾಡು ಕ್ಷೇತ್ರದಲ್ಲಿ ರೈತರು ಮತ್ತು ಕೃಷಿ ಕಾರ್ಮಿಕರ ನಡುವೆ ತಿಕ್ಕಾಟ ನಡೆಯುತ್ತಿದೆ. ಆಳುವ ಪಕ್ಷಕ್ಕೆ ತಮ್ಮ ನಿಷ್ಠೆಯಿಂದೆಯೆನ್ನುವ ಕೆಲವು ಕೃಷಿ ಕಾರ್ಮಿಕರು ತಮ್ಮನ್ನು ಮಾತ್ರ ತಮ್ಮದೇ ಶರತ್ತುಗಳ ಮೇಲೆ ಕೆಲಸಕ್ಕೆ ತೆಗೆದುಕೊಳ್ಳಬೇಕೆಂದು ಹೇಳುತ್ತಿದ್ದಾರೆ. ಇಂತಹ ಸಂದರ್ಭಗಳಲ್ಲಿ ಬಿ.ಜೆ.ಪಿ. ಕಾರ್ಯಕರ್ತರು ಕಿರುಕುಳಕ್ಕೊಳಗಾದ ರೈತನಿಗೆ ಸಹಾಯ ಮಾಡಲು ಮುಂದೆ ಬಂದಿದ್ದಾರೆ" ಗಮನಿಸಬೇಕಾದ ಅಂಶವೆಂದರೆ 'ಸ್ಟೇಟ್ಸ್‌ಮನ್' ವರದಿಗಾರ ಬಿ.ಜೆ.ಪಿ. ಕಾರ್ಯಕರ್ತರೆಂದು ಗುರುತಿಸುವವರನ್ನೇ ಆರ್. ಎಸ್. ಎಸ್. ನ ಮುಖವಾಣಿ 'ಆರ್ಗನೈಸರ್' ಆರ್. ಎಸ್. ಎಸ್. ಕಾರ್ಯಕರ್ತರೆಂದು ಗಳನ್ನು ಮುಂದಿಟ್ಟುಕೊಂಡು ರಾತೋರಾತ್ರಿ ತಾವಾಗಿಯೇ 'ರಾಷ್ಟ್ರೀಯ ಪರ್ಯಾಯ'ವಾಗಬಲ್ಲೆವು ದೆಂದು ಹೇಳುವುದು ತೀರಾ ಹಾಸ್ಯಾಸ್ಪದ.

ಕಾಂಗ್ರೆಸ್(ಐ)ನ ಧೋರಣೆಗಳಿಗೆ ಪರ್ಯಾಯವೆಸಗಬಹುದಾದ ಯಾವ ಧೋರಣೆಗಳನ್ನು ತಾನೇ ಬಿ.ಜೆ.ಪಿ. ಜನತೆಯ ಮುಂದಿಡುತ್ತಿದೆ?

1\. ರಾಷ್ಟ್ರೀಯ ಏಕತೆಗಾಗಿ ಹೋರಾಡುತ್ತೇವೆ ಎನ್ನುವ ಬಿ.ಜೆ.ಪಿ. ನಾಯಕರು ಅಸ್ಸಾಂನ ಪ್ರತ್ಯೇಕತಾವಾದಿ ಚಳವಳಿಗೆ ಸಂಪೂರ್ಣ ಬೆಂಬಲ ಕೊಡುತ್ತಿದ್ದಾರೆ.

2\. ಪರಿಶಿಷ್ಟ ಜಾತಿ ಮತ್ತು ಬುಡಕಟ್ಟು ಜನಾಂಗದವರ ಬಗ್ಗೆ ತಮ್ಮ ನಿರ್ಣಯಗಳಲ್ಲಿ ಕಣ್ಣೀರು ಸುರಿಸಿದರೂ ಗುಜರಾತ್ ಹಾಗೂ ಇತರೆಡೆ ನಡೆಯುತ್ತಿರುವ ಮೀಸಲಾತಿ ವಿರೋಧೀ ಚಳುವಳಿಗಳಲ್ಲಿ ಬಿ.ಜೆ.ಪಿ. ಕಾರ್ಯಕರ್ತರು ಸಕ್ರಿಯರಾಗಿದ್ದಾರೆ.

3\. ಭಾರತ ಒಂದು ಒಕ್ಕೂಟವಾಗಿರುವುದು ಬಿ.ಜೆ.ಪಿ. ನಾಯಕರಿಗೆ ಇಷ್ಟವಿಲ್ಲ. ಎಲ್ಲಾ ಭಾಷಾವಾರು ರಾಜ್ಯಗಳನ್ನು ಅಳಿಸಿ ಈಗಿನ ಮುನಿಸಿಪಾಲಿಟಿಗಳಷ್ಟು ಮಾತ್ರ ಅಧಿ ಮಾಡಿದ್ದಾರೆ. ಈ 'ಗಾಂಧೀ ಸಮಾಜವಾದ' ಎಂದರೇನು ? ಆರ್. ಎಸ್. ಎಸ್.ನ ಮುಖವಾಣಿ 'ಆರ್ಗನೈಸರ್' ನಲ್ಲಿ ಈ ಬಗ್ಗೆ ಸೂಚನೆಸಿಗುತ್ತದೆ. ಅದರ ಪ್ರಕಾರ "ಟಾಟಾ, ಬಿರ್ಲಾಗಳನ್ನು ಶೋಷಕರೆಂದು ಹೀಗಳೆಯುವುದು ಈ ದೇಶದಲ್ಲಿ ಕೆಲವು ವಲಯಗಳಲ್ಲಿ ಫ್ಯಾಶನ್ ಆಗಿಬಿಟ್ಟಿದೆ. ಆರ್ಥಿಕ ವ್ಯವಸ್ಥೆಯನ್ನು ಕಟ್ಟಿ, ಸಮಾಜವನ್ನು ಬದಲಿಸುವುದರಲ್ಲಿ ಕೈಗಾರಿಕೆ ಹಾಗೂ ವ್ಯಾಪಾರೋದ್ಯಮದ ಪಾತ್ರವನ್ನು ಗಮನಿಸಿದರೆ ನಮ್ಮ ದೇಶದಲ್ಲಿ ಇನ್ನಷ್ಟು ಟಾಟಾ ಬಿರ್ಲಾಗಳು ಬರಬೇಕು ಎಂದು ಹೇಳಬೇಕಾಗುತ್ತದೆ". ಬಂಡವಾಳಶಾಹಿ, ದೊಡ್ಡ ವ್ಯಾಪಾರೋದ್ಯಮಿಗಳು ಹಾಗೂ ದೊಡ್ಡ ಜಮೀನ್ದಾರರ ಬಗ್ಗೆ ಬಿ.ಜೆ.ಪಿ. ಹೊಂದಿರುವ ಪ್ರೀತಿಯಿಂದಾಗಿ ಭಾರತದ ಕಾರ್ಮಿಕರು, ರೈತರು ಹಾಗೂ ಇತರ ಶ್ರಮಿಕ ಜನತೆ ದೇಶದ ಸಂಪತ್ತಿನ ಉತ್ಪಾದನೆಯಲ್ಲಿ ವಹಿಸುತ್ತಿರುವ ಮಹತ್ತರ ಪಾತ್ರ ಅವರ ಕಣ್ಣಿಗೇ ಬೀಳುವುದಿಲ್ಲ, ಇದು ದೇಶಕ್ಕೆ ಪರ್ಯಾಯ ನಾಯಕತ್ವ ಕೊಡುತ್ತೇನೆನ್ನುವ ಪಕ್ಷದ ಲಕ್ಷಣವೇ ?

6\. "ವರ್ಗ ಹಾಗೂ ಜಾತಿ ಹೋರಾಟದ ತಳಹದಿಯ ಮೇಲೆ ಪ್ರಜಾಸತ್ತಾತ್ಮಕ ವ್ಯವಸ್ಥೆ ನಿಲ್ಲಲು ಸಾಧ್ಯವಿಲ್ಲ"ಎಂಬುದೂ ಬಿ.ಜೆ.ಪಿ.ಯ

'ರಾಷ್ಟ್ರೀಯ ಪರ್ಯಾಯ'- ಬಿ.ಜೆ.ಪಿ.ಯ ಮುಂಗಾಟಗಳು

–ಕೆ. ವಿ.

ಬಿ.ಜೆ.ಪಿ.ಯ ನಾಯಕತ್ವಕ್ಕೆ ಇದಕ್ಕಿಂತಲೂ ಹೆಚ್ಚು ಮುಖ್ಯವಾದ ಕಾರಣವಿತ್ತು. ಎಲ್ಲರಿಗೂ ತಿಳಿದಿರುವಂತೆ ಈ ರಾಜ್ಯದಲ್ಲಿ ಬಿ.ಜೆ.ಪಿ. ಅಖಿಲ ಭಾರತ ಆಳುವ ಪಕ್ಷವಾದ ಹಾಗು ತಾನು ಪರ್ಯಾಯವಾಗಬಯಸುವ ಕಾಂಗ್ರೆಸ್(ಐ) ಹಾಗೂ ಮೊನ್ನೆ-ಮೊನ್ನೆ ತಾನೇ ಆರ್.ಎಸ್.ಎಸ್. ವಿವಾದದಿಂದಾಗಿ ದೂರಸರಿದ ಜನತಾ ಪಕ್ಷದೊಡನೆ ರಾಜಕೀಯ ಮಿತ್ರತ್ವ ಹೊಂದಿದೆ. ಬಿ.ಜೆ.ಪಿ.ಯ ಕೇರಳ ರಾಜ್ಯ ಅಧ್ಯಕ್ಷರು 1980ರ ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ನೇತೃತ್ವದ "ಪ್ರಜಾಸತ್ತಾತ್ಮಕ ಸಂಯುಕ್ತ ರಂಗ"ದ ಅಭ್ಯರ್ಥಿಯಾಗಿದ್ದರು. ನಂತರದ ವಿಧಾನಸಭಾ ಚುನಾವಣೆಗಳಲ್ಲೂ ಈ ಶಖ್ಯ ಮುಂದುವರೆದಿತ್ತು. ಈಗ ವಿಧಾನಸಭೆಯಲ್ಲಿ ಅಧಿಕೃತವಾಗಿಯಲ್ಲದಿದ್ದರೂ ಕಾರ್ಯತಃ ಕಾಂಗ್ರೆಸ್ (ಐ) ನೇತೃತ್ವದ ವಿರೋಧ ಪಕ್ಷಗಳ ಸಂಯುಕ್ತರಂಗದಲ್ಲಿ ಈ ಸಖ್ಯತೆ ಮುಂದುವರೆದಿದೆ. ಕಾಂಗ್ರೆಸ್ (ಐ)ನೊಂದಿಗಿನ ಈ ಸಖ್ಯತೆಯಿಂದ ಎಷ್ಟೊಂದು ರಾಜಕೀಯ ಲಾಭವಿದೆಯೆಂಬುದನ್ನು ಇತರ ರಾಜ್ಯಗಳ ತಮ್ಮ ಸಹಯೋಗಿಗಳಿಗೆ ತೋರಿಸಿಕೊಡಬೇಕೆಂದು ವಾಜಪೇಯಿ,ಅದ್ವಾನಿ ಹಾಗೂ ಇತರ ನಾಯಕರು ಬಯಸಿದ್ದರು. ಕೊಚ್ಚಿಯ ಆಯ್ಕೆಗೆ ಇದು ಪ್ರಮುಖ ಕಾರಣ.

ಬಿ.ಜೆ.ಪಿ.ಯ ಕೊಚ್ಚಿ ಅಧಿವೇಶನದ ಬಗ್ಗೆ ದೆಹಲಿಯ 'ಸ್ಟೇಟ್ಸ್‌ಮನ್' ಪತ್ರಿಕೆಯ ವರದಿಗಾರ ಹೀಗೆ ಬರೆದಿದ್ದಾನೆ- "ಬಿ.ಜೆ.ಪಿ. ಒಂದು ಶಕ್ತಿಯಾಗಿ ಮೂಡಿಬರುತ್ತಿರುವುದು, ಕನಿಷ್ಠ ಪಕ್ಷ ಅತ್ಯಧಿಕ ರಾಜಕೀಯ ಪ್ರಜ್ಞೆಯನ್ನು ಕೇರಳದಲ್ಲಿ ಮೂಡಿಬರುತ್ತಿರುವುದು ಆ ಪಕ್ಷದ ನಾಯಕರಿಗೂ ಆಶ್ಚರ್ಯವನ್ನುಂಟುಮಾಡಿದೆ. ಈ ರೀತಿ ಬೆಳೆಯಲು, ವೇಗವಾಗಿ ಬೆಳೆಯಲು ಕಾರಣವೇನೆಂದರೆ ಅದು ಮಾರ್ಕ್ಸ್‌ವಾದಿಗಳ ವಿರುದ್ಧ ಹೋರಾಡುವ ಒಂದು 'ಪ್ರತಿಭಟನೆಯ ಶಕ್ತಿ' ಯೆಂದು ಜನತೆಯ ಒಂದು ದೊಡ್ಡ ವಿಭಾಗ ಗುರುತಿಸಲಾರಂಭಿಸಿದೆ" ಬಿ. ಜೆ. ಪಿ. ಬಗ್ಗೆ ಸಹಾನುಭೂತಿ ಹೊಂದಿರುವ ಈ ವರದಿಗಾರನೇ ಬಿ.ಜೆ.ಪಿ.ಯ 'ಶಕ್ತಿ'ಯ ಮೂಲ ಯಾವುದು ಎಂಬುದರ ಸೂಚನೆ ಕೊಟ್ಟಿದ್ದಾನೆ. ಕೇರಳದ ಎಡ ಪ್ರಜಾಸತ್ತಾತ್ಮಕ ರಂಗದ ಸರಕಾರಕ್ಕೆ ವಿರುದ್ಧವಾಗಿರುವ ಎಲ್ಲಾ ಶಕ್ತಿಗಳು-ಕಾಂಗ್ರೆಸ್(ಐ), ಕೇರಳ ಕಾಂಗ್ರೆಸ್‌ನ ಒಂದು ವಿಭಾಗ, ಇಂಡಿಯನ್ ಮುಸ್ಲಿಂ ಲೀಗ್ ಹಾಗೂ ಕೇರಳದ ಸಾಮಾಜಿಕ ಆರ್ಥಿಕ ಸುಧಾರಣೆಗಳಿಂದ ನಷ್ಟವನ್ನನುಭವಿಸಿದ ಪಟ್ಟಭದ್ರ ಹಿತಾಸಕ್ತಿಗಳು-ಕೇರಳದಲ್ಲಿ ಆರ್.ಎಸ್. ಎಸ್. ಬಗ್ಗೆ ಈ ವರದಿಗಾರ ಹೇಳಿರುವ ರೀತಿಯಲ್ಲಿ ಯೋಚಿಸುವುದರಲ್ಲಿ ಹೇಳಿಕೊಂಡಿದೆ. ಮತ್ತು ಇಂತಹ 'ಕಿತ್ತಾಟ'ಗಳೇ 'ಮಾರ್ಕ್ಸ್‌ವಾದೀ–ಆರ್.ಎಸ್.ಎಸ್. ಘರ್ಷಣೆ'ಯೆಂದು ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿವೆ. ಇದರಿಂದ ಆರ್. ಎಸ್. ಎಸ್. ಮತ್ತು ಬಿ.ಜೆ.ಪಿ.ಯ ಸಂಬಂಧ ಯಾವ ರೀತಿಯದ್ದು ಹಾಗೂ ಬಿ.ಜೆ.ಪಿ.ಯ 'ಶಕ್ತಿ'ಯ ಮೂಲ ಯಾವುದು ಎಂಬುದು ಸ್ಪಷ್ಟವಾಗುತ್ತದೆ. ಇದಲ್ಲದೆ ಕೊಚ್ಚಿ ಅಧಿವೇಶನದಲ್ಲಿ ಭಾಗವಹಿಸಿದ ನಾಯಕರು ಹಾಗೂ ಕಾರ್ಯಕರ್ತರು ಆರ್. ಎಸ್. ಎಸ್. ಸದಸ್ಯರು ಎಂದು ಎಲ್ಲರಿಗೂ ತಿಳಿದಿದೆ. ಆದ್ದರಿಂದ ಬಿ.ಜೆ.ಪಿ.ಯ ನಾಯಕರು ಎಷ್ಟೇ ಪ್ರಯತ್ನಿಸಿದರೂ ಆರ್.ಎಸ್. ಎಸ್ ನೊಡನೆ ಇರುವ ನಿಕಟ ಸಂಬಂಧದ ಬಗ್ಗೆ ಅವರು ಯಾರನ್ನೂ ಮೋಸಗೊಳಿಸಲು ಸಾಧ್ಯವಿಲ್ಲ.

ಬಿ.ಜೆ.ಪಿ. ಪರ್ಯಾಯ ಪಕ್ಷವಾಗಬಲ್ಲುದೇ?

ಒಂದು ಸಂಕುಚಿತ ಕೋಮುವಾದೀ ಹಾಗೂ ಜನವಿರೋಧಿ ಸಿದ್ಧಾಂತಗಳನ್ನು ಹೊಂದಿರುವ ಸಂಸ್ಥೆಯ ಕಾರ್ಯಕರ್ತರಿಂದ ಕೂಡಿ ಬಿ.ಜೆ.ಪಿ. 34 ವರ್ಷಗಳಿಂದ ನಮ್ಮ ದೇಶದ ಆಳುವ ವರ್ಗಗಳು ಅನುಸರಿಸಿಕೊಂಡು ಬಂದ ಧೋರಣೆಗಳಿಗೆ ಪರ್ಯಾಯವಾದ ಧೋರಣೆ ಹಾಗೂ ಕಾರ್ಯಕ್ರಮ ಕಾರವಿರುವ ಆಡಳಿತ ಘಟಕಗಳಿಂದ ಕೂಡಿದ ಏಕ ಘಟಕ ಸರಕಾರ ಪದ್ಧತಿ ಇರಬೇಕೆಂದು ಅವರ ಆಸೆ.

4\. ಸೋವಿಯೆತ್ ಯೂನಿಯನ್ ಮೇಲೆ ದೋಷ ಹೊರೆಸಿ ವಿವಿಧ ದೇಶಗಳ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿರುವ ಅಮೇರಿಕನ್ ಸಾಮ್ರಾಜ್ಯಶಾಹಿಯನ್ನು ಬೆಂಬಲಿಸಿದ್ದಾರೆ. ಬಹುಶಃ 50 ರ ಹಾಗೂ 60ರ ದಶಕದಲ್ಲಿ ಪಾಕ್ಕಿಸ್ತಾನ ನಮ್ಮ ಮೇಲೆ ಆಕ್ರಮಣ ನಡೆಸಲು ಪ್ರೇರಣೆಯಿತ್ತವರು ಅಮೇರಿಕನ್ನರು ಹಾಗೂ ನಮ್ಮ ಸಹಾಯಕ್ಕೆ ನಿಂತದ್ದು ಸೋವಿಯೆತ್ ಯೂನಿಯನ್ ಎಂಬುದನ್ನು ಈ 'ದೇಶಭಕ್ತ'ರು ಮರೆತುಬಿಟ್ಟಿರಬೇಕು. ಜಾಗತಿಕ ರಾಜಕೀಯದಲ್ಲಿ ಸೋವಿಯೆತ್ ಯೂನಿಯನ್‌ನ ಪ್ರವೇಶದಿಂದಾಗಿ ಸಾಮ್ರಾಜ್ಯಶಾಹಿಯ ಭದ್ರಕೋಟೆಯಲ್ಲಿ ಬಿರುಕುಕಾಣಲಾರಂಭಿಸಿ ಇಂದು ಹಲವು ದೇಶಗಳ ರಾಷ್ಟ್ರೀಯ ವಿಮೋಚನೆಗೆ ಸಹಾಯಕವಾಯಿತು ಎಂಬುದನ್ನು ವಸಾಹತುಶಾಹಿಯಿಂದ ಮುಕ್ತಪಡೆದ ಭಾರತದಂತಹ ದೇಶಗಳ ನಾಯಕರಾಗಬಯಸುವವರು ಮರೆಯುವುದು ಸಾಧ್ಯವಿಲ್ಲ.

5\. ತಾವು 'ಗಾಂಧೀ ಸಮಾಜ'ದ ಅನುಯಾಯಿಗಳೆಂದು ಸಾರುವ ತಂತ್ರವನ್ನು ಬಿ.ಜೆ.ಪಿ. ನಾಯಕರು ನಾಯಕರ ಅಭಿಪ್ರಾಯ. ವರ್ಗ ಹಾಗೂ ಜಾತಿಗಳಿಂದ ಕೂಡಿದ ವ್ಯವಸ್ಥೆಯಲ್ಲಿ ಈ ರೀತಿ ಹೇಳುವುದು ವಾಸ್ತವವನ್ನು ಮರೆತು ಆಕಾಶದ ಶೂನ್ಯದಲ್ಲಿ ನಡೆಸುವ ಹಾರಾಟ ಮಾತ್ರವಾಗುತ್ತದೆ. ವರ್ಗ ವೈರುಧ್ಯ, ಶೋಷಕ-ಶೋಷಿತ ವ್ಯತ್ಯಾಸ ನಿಜವಾಗಿಯೂ ಇಲ್ಲವಾದರೆ ಬಿ.ಜೆ.ಪಿ. ಗೆಳೆಯರು ಬಿ.ಎಮ್.ಎಸ್. ಯೂನಿಯನ್‌ಗಳನ್ನೇಕೆ ಸಂಘಟಿಸಬೇಕು? ಇಂತಹ ಅಗ್ಗದ ಸಡಿಲ ಮಾತುಗಳನ್ನಾಡುವ ವಾಸ್ತವತೆಯನ್ನು ಕಡೆಗಣಿಸುವ ಪಕ್ಷ ರಾಷ್ಟ್ರೀಯ ಪರ್ಯಾಯದ ಆಸೆಯಿಟ್ಟುಕೊಳ್ಳಬಹುದೇ?

ಸಿ.ಪಿ.ಐ.(ಎಂ)ನ "ಸಹಕಾರದ ಕೇಳಿಕೆ"

ಈಗಿನ ವಾಸ್ತವತೆಯನ್ನು ಗಮನಿಸಿದರೆ ಸಿ. ಪಿ. ಐ. (ಎಂ) ಆಗಲಿ, ಇನ್ಯಾವುದೇ ಪಕ್ಷವಾಗಲೀ ಕಾಂಗ್ರೆಸ್ (ಐ) ಆಳ್ವಿಕೆಗೆ ಪರ್ಯಾಯವೆಸಗುವಷ್ಟು ಶಕ್ತಿಶಾಲಿಯಾಗಿಲ್ಲ ಎಂದು ಸಿಪಿಐ(ಎಂ) ಭಾವಿಸುತ್ತದೆ. ನಿಜವಾದ ರಾಷ್ಟ್ರೀಯ ಪರ್ಯಾಯ ಮೂಡಿಬರಬೇಕಾದರೆ ಎಲ್ಲಾ ಎಡ, ಪ್ರಜಾಪ್ರಭುತ್ವವಾದೀ ಹಾಗೂ ಜಾತ್ಯಾತೀತ ಶಕ್ತಿಗಳು ಈಗಿರುವ

(6ನೇ ಪುಟ ನೋಡಿ)

ಆರ್. ಚಂದ್ರ

ಆರ್ಥಿಕ ಸಮೀಕ್ಷೆ :

ಸಮಾಜವಾದದ ಕುರಿತು ಇಂದಿರಾಗಾಂಧಿ

ಇಂದಿರಾಗಾಂಧಿ ಸಮಾಜವಾದ :

ಆರನೇ ಪಂಚವಾರ್ಷಿಕ ಯೋಜನೆಯ (1980-85) ಅಂತಿಮ ಅಂಗೀಕಾರ ಪಡೆಯಲು ಕಳೆದ ಫೆಬ್ರವರಿಯಲ್ಲಿ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ (NDC) ಸಭೆ ಕರೆಯಲಾಗಿತ್ತು. ಅದರಲ್ಲಿ ಎಲ್ಲಾ ರಾಜ್ಯದ ಮುಖ್ಯಮಂತ್ರಿಗಳೂ ಭಾಗವಹಿಸಿದ್ದರು. ಕೇರಳ, ಪ. ಬಂಗಾಳ ಮತ್ತು ತ್ರಿಪುರಾ ರಾಜ್ಯಗಳ ಮುಖ್ಯಮಂತ್ರಿಗಳು ಆರನೇ ಯೋಜನೆಯೂ ಹಿಂದಿನ ಎಲ್ಲಾ ಯೋಜನೆಗಳಂತೆ ಬಂಡವಾಳಶಾಹಿ ಆರ್ಥಿಕ ಮಾರ್ಗವನ್ನೇ ಅನುಸರಿಸಲಿರುವುದರಿಂದ ದೇಶದ ಮೂಲಭೂತ ಸಮಸ್ಯೆಗಳಾವುವೂ ಬಗೆಹರಿಯಲಾರವು ಎಂದು ಟೀಕಿಸಿದರು. ಪ್ರತ್ಯುತ್ತರವಾಗಿ, ಎಡಪಂಥದವರು ಇನ್ನೂ ಪ್ರಾಚೀನ ಪದಪ್ರಯೋಗದಲ್ಲಿಯೂ ಹಳೆಯ ನಿರುಪಯುಕ್ತ ಸೈದ್ಧಾಂತಿಕ ವಿಷಯಗಳಲ್ಲಿಯೂ ಆಸಕ್ತರಾಗಿರುವರೆಂದು ಪ್ರಧಾನಿ ಇಂದಿರಾಗಾಂಧಿ ಮರು ಟೀಕಿಸಿದರು. ತಾವು ಅನುಸರಿಸಿಕೊಂಡುಬರುತ್ತಿರುವ 'ಮಿಶ್ರ ಆರ್ಥಿಕ ನೀತಿ'ಯು (mixed economy) ನಿಧಾನವಾಗಿಯಾದರೂ ನಿಶ್ಚಯವಾಗಿ ಸಮಾಜವಾದದತ್ತ ನಮ್ಮನ್ನು ಕೊಂಡೊಯ್ಯುವುದೆಂದರು. ಎಡಪಂಥದವರು ಆದರ್ಶವೆಂದು ತಿಳಿದಿರುವ ಮಾರ್ಕ್ಸ್‌ವಾದಿ ಸಮಾಜವಾದವನ್ನು ಅನುಸರಿಸುತ್ತಿರುವ ದೇಶಗಳೂ ಇತ್ತೀಚೆಗೆ ತಮ್ಮ ಆರ್ಥಿಕ ನಿಯಂತ್ರಣಗಳನ್ನು ಸಡಿಲುಗೊಳಿಸುತ್ತಿವೆ. ಬಹುರಾಷ್ಟ್ರೀಯ ಸಂಸ್ಥೆಗಳೂ ಸೇರಿದಂತೆ ವಿದೇಶಿ ತಂತ್ರಜ್ಞಾನವನ್ನು ಬರಮಾಡಿಕೊಳ್ಳುತ್ತಿವೆ. ಅತ್ಯಾದರ್ಶವಾದ ಒಂದು ಸಮಾಜವಾದಿ ದೇಶವಂತೂ (ರಷ್ಯಾ) ಎಲ್ಲೆಡೆಗಳಿಂದ-ಮುಖ್ಯವಾಗಿ ಬಂಡವಾಳಶಾಹಿ ರಾಷ್ಟ್ರಗಳಿಂದ ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳುತ್ತಿದೆ. ಆದರೆ ಭಾರತದ 'ಮಿಶ್ರ ಆರ್ಥಿಕನೀತಿ'ಯು ತಮ್ಮ ಸಮಾಜವಾದದಿಂದ ಸದ್ದಿಲ್ಲದ ಕ್ರಾಂತಿ ನಡೆಯುತ್ತಿದೆ. ನಮ್ಮ ದೇಶ ಆಹಾರ ಧಾನ್ಯಗಳಲ್ಲಿ ಈಗಾಗಲೇ ಸ್ವಾವಲಂಬನೆಹೊಂದಿದೆ. ಆದುದರಿಂದ 'ಸಮಾಜವಾದಿ' ಪದ್ಧತಿಗಿಂತ ತಮ್ಮ 'ಬಂಡವಾಳಶಾಹಿ' ಪದ್ಧತಿಯೇ ಉತ್ತಮವೆಂದು ಇಂದಿರಾಗಾಂಧಿ ಪ್ರತಿಪಾದಿಸಿದರು!

ಹಿಟ್ಲರ್‌ನ ಸಮಾಜವಾದ :

ಮಾರ್ಕ್ಸ್‌ವಾದಿ ಸಮಾಜವಾದಕ್ಕಿಂತ ತಮ್ಮ ಸಮಾಜವಾದವೇ ಉತ್ತಮ ಎಂದು ಪ್ರತಿಪಾದಿಸಿದವರಲ್ಲಿ ಇಂದಿರಾಗಾಂಧಿ ಮೊದಲಿಗರೇನಲ್ಲ. ಅಡಾಲ್ಫ್ ಹಿಟ್ಲರನ ರಾಷ್ಟ್ರೀಯ ಸಮಾಜವಾದ, ಯೂರೋಪ್-ಅಮೇರಿಕಗಳಲ್ಲಿನ ಪ್ರಜಾಸತ್ತಾತ್ಮಕ-ಸಮಾಜವಾದ, ಇಸ್ಲಾಮಿಕ್ ಸಮಾಜವಾದ, ಮೂರನೇ ಜಗತ್ತಿನ ರಾಷ್ಟ್ರಗಳಲ್ಲಿನ ಬಗೆಬಗೆಯ ಸಮಾಜವಾದ, ಇವೆಲ್ಲವೂ ರಷ್ಯಾ, ಚೀನಾ, ವಿಯಟ್ನಾಂ, ಕ್ಯೂಬಾ, ಪೂ. ಯೂರೋಪ್‌ನ ರಾಷ್ಟ್ರಗಳಲ್ಲಿನ ಸಮಾಜವಾದಗಳಿಗಿಂತ ಶ್ರೇಷ್ಠ ಎಂದು ಆಯಾಯ ದೇಶಗಳ ಭೂಮಾಲಕ-ಬಂಡವಾಳಶಾಹಿ ಆಳುವ ವರ್ಗಗಳು ಸಾರಿಕೊಂಡು ಬಂದಿವೆ. ನಮ್ಮ ದೇಶದಲ್ಲಿಯೇ ಗಾಂಧೀ ಸಮಾಜವಾದ, ಹಿಂದೂಸಮಾಜವಾದ, ಗರೀಬಿಹಟಾವೋ ಸಮಾಜವಾದ, ಸಮಾಜವಾದಿ ಮಾದರಿ ಸಮಾಜ, ಸರ್ವೋದಯ ಸಮಾಜವಾದ, ಇತ್ಯಾದಿ ಆದರ್ಶಗಳನ್ನು ಭೂಮಾಲಕ-ಬಂಡವಾಳಶಾಹಿ ರಾಜಕೀಯ ಪಕ್ಷಗಳು ಪಂಗಡಗಳು ಜನರ ಮುಂದಿಡುತ್ತಿವೆ. ಇವೆಲ್ಲವುಗಳ ಏಕೈಕ ಪ್ರಯತ್ನವೆಂದರೆ, ಮಾರ್ಕ್ಸ್‌ವಾದಕ್ಕನುಗುಣವಾದ ವೈಜ್ಞಾನಿಕ ಸಮಾಜವಾದ ಸ್ಥಾಪಿಸಲು ರೈತ-ಕಾರ್ಮಿಕರ ಧುರೀಣತ್ವದಲ್ಲಿ ನಡೆಯುತ್ತಿರುವ ಹೋರಾಟದಿಂದ ಜನರನ್ನು ವಿಮುಖಗೊಳಿಸುವುದಾಗಿದೆ.

ಸೋವಿಯೆತ್ ಯೂನಿಯನ್ ಸಹ ಸೇರಿದಂತೆ ಎಲ್ಲಾ ಸಮಾಜವಾದಿ ರಾಷ್ಟ್ರಗಳ ಸಾಧನೆಗಳನ್ನು ಮೂಪೂ ಮಾಡುತ್ತಿರುವ ಇಂದಿರಾಗಾಂಧಿ ಹಾಗೂ ಅವರ ಪಕ್ಷ 'ಪುರೋಗಾಮಿ' ಮತ್ತು 'ರಷ್ಯಾಪರ' ಎಂದು ಭ್ರಮೆ ಯಾರಿಗಾದರೂ ಇನ್ನೂ ಇದ್ದರೆ, ಅದನ್ನು ಕಿತ್ತೊಗೆಯುವ ಸಮಯ ಸನ್ನಿಹಿತವಾಗಿದೆ. ತಮ್ಮ ಸಮಾಜವಾದ ಮಾರ್ಕ್ಸ್‌ವಾದಿ ಸಮಾಜವಾದಕ್ಕಿಂತ ಶ್ರೇಷ್ಠ ಎಂಬ ಇಂದಿರಾಗಾಂಧಿವಾದಕ್ಕೆ ಅವರ ಸರಕಾರದ ಅಂಕಿಅಂಶಗಳಿಂದಲೇ ಉತ್ತರಿಸೋಣ.

೧. ಭಾರತವು ಆಹಾರೋತ್ಪಾದನೆಯಲ್ಲಿ ಸ್ವಾವಲಂಬಿಯೆ?

ಆಹಾರಧಾನ್ಯಗಳನ್ನು ಆಮದು ಮಾಡಿಕೊಳ್ಳದಿರುವುದಾಗಲೀ, ಅವುಗಳನ್ನು ರಫ್ತುಮಾಡುವುದಾಗಲೀ ಒಂದು ದೇಶದ ಆರ್ಥಿಕ ಅಭಿವೃದ್ಧಿಯ ಮತ್ತು ಸ್ವಾವಲಂಬನೆಯ ಸಂಕೇತವಾದೀತೆ ? ಭಾರತವು ಬ್ರಿಟಿಷರ ವಸಾಹತುವಾಗಿದ್ದಾಗ, ಅನೇಕ ಬರಗಾಲಗಳಿಂದ ಪೀಡಿತವಾಗಿದ್ದಾಗ, ಆಹಾರಧಾನ್ಯಗಳನ್ನು ಆಮದುಮಾಡುತ್ತಿರಲಿಲ್ಲ. ಬದಲು ಭಾರತದಿಂದ ಬಲಾತ್ಕಾರವಾಗಿ ಆಹಾರಧಾನ್ಯಗಳನ್ನು ಇತರ ದೇಶಗಳಿಗೆ ರಫ್ತು ಮಾಡಲಾಗುತ್ತಿತ್ತು. 1940ರ ದಶಕದ ಬಂಗಾಳದ ಭೀಕರ ಬರಗಾಲದಲ್ಲಿ ನಾಲ್ಕು ಮಿಲಿಯ ಜನರು ಅನ್ನನೀರು ಇಲ್ಲದೆ ಸಾಯುತ್ತಿರುವಾಗ ಆಹಾರಧಾನ್ಯಗಳನ್ನು ಬ್ರಿಟಿಷ್ ಸರಕಾರ ಬಂಗಾಳದಿಂದ ರಫ್ತು ಮಾಡಲಾಗುತ್ತಿತ್ತು. ಇಂದಿರಾಗಾಂಧಿಯ ಲೆಕ್ಕದಲ್ಲಿ ಬ್ರಿಟಿಷರ ಆಳ್ವಿಕೆಯಲ್ಲಿದ್ದ ಭಾರತ, ಬಂಗಾಳದಂತಹ ಬರಗಾಲಗಳಿಗೆ ಒಳಗಾದ ಭಾರತ, ಆಹಾರ ಸಾಮಗ್ರಿಗಳನ್ನು ಆಮದು ಮಾಡಿಕೊಳ್ಳದೆ ರಫ್ತು ಮಾಡುತ್ತಿದ್ದುದರಿಂದ ಶ್ರೀಮಂತ ಹಾಗೂ ಸ್ವಾವಲಂಬಿ ರಾಷ್ಟ್ರವಾಗಿತ್ತು! 1966ರಲ್ಲಿ ಬಿಹಾರದಲ್ಲಿ ಭೀಕರ ಬರಗಾಲ ಬಂದಾಗಲೂ ಪ್ರಧಾನಿ ಇಂದಿರಾಗಾಂಧಿ ಆಹಾರದ ಕೊರತೆಯೇ ಇಲ್ಲ ಎಂದು ವಾದಿಸುತ್ತಿದ್ದರು! ಜಗತ್ತಿನ ಅತ್ಯಂತ ಪ್ರಬಲ ಬಂಡವಾಳಶಾಹಿ ರಾಷ್ಟ್ರವಾದ ಬ್ರಿಟನ್ ವರ್ಷದುದ್ದಕ್ಕೂ ಆಹಾರ ಧಾನ್ಯಗಳನ್ನು ಆಮದು ಮಾಡುತ್ತಿರುವುದರಿಂದ ಇಂದಿರಾಗಾಂಧಿಯ ಲೆಕ್ಕದಲ್ಲಿ ಅದು ಭಾರತಕ್ಕಿಂತಲೂ ಬಡರಾಷ್ಟ್ರ!

ಕೊರತೆಯಲ್ಲಿಯೂ ರಫ್ತು

ಯಾವುದೇ ವಸ್ತುವನ್ನು ಆಮದು ಮಾಡುವುದಾಗಲೀ ರಫ್ತು ಮಾಡುವುದಾಗಲೀ ಸರಕಾರದ ಆರ್ಥಿಕ ನೀತಿಯನ್ನು ಅವಲಂಬಿಸಿದೆ. ಉದಾಹರಣೆಗೆ, ಆಹಾರ ಧಾನ್ಯಗಳ ಉತ್ಪಾದನೆಯು ಸಾಕಷ್ಟಿಲ್ಲದಿದ್ದರೆ, ಅವುಗಳ ಸಂಗ್ರಹ ಹೆಚ್ಚಾಗಿ ಮಾರುಕಟ್ಟೆಗೆ ಸರಬರಾಜು ಕಡಿಮೆಯಾಗುವುದು. ಆಗ ಮುಕ್ತ ಮಾರುಕಟ್ಟೆಗಳಲ್ಲಿ ಅವುಗಳ ಬೆಲೆಗಳು ಏರುವುವು. ಕೊರತೆ ನೀಗಿಸಲು ಜನಹಿತ ದೃಷ್ಟಿಯಿಂದ ಸರಕಾರ ಸಕಾಲದಲ್ಲಿ ಸಾಕಷ್ಟು ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳದಿದ್ದರೆ, ಬೆಲೆಗಳು ಮತ್ತಷ್ಟು ಹೆಚ್ಚಿ ಜನರ ಗ್ರಾಹಕ ಶಕ್ತಿಗೆ ಆಹಾರಧಾನ್ಯಗಳು ಎಟಕಲಾರದಾಗುವುವು. ಆಗ ಕೂಡಿಟ್ಟ ಆಹಾರ ಧಾನ್ಯಗಳಿಗೆ ಆಂತರಿಕ ಮಾರುಕಟ್ಟೆ ಕ್ಷಯಿಸುವುದು. ಆ ಸಂದರ್ಭದಲ್ಲಿ ಭೂಮಾಲಕರ ಹಾಗೂ ವ್ಯಾಪಾರಸ್ಥರ ಹಿತದೃಷ್ಟಿಯಿಂದ ಸರಕಾರವು ಕೂಡಿಟ್ಟ ಆಹಾರಧಾನ್ಯಗಳಿಗೆ ವಿದೇಶಗಳಲ್ಲಿ ಮಾರುಕಟ್ಟೆ ಒದಗಿಸಿ ಅವುಗಳನ್ನು ರಫ್ತು ಮಾಡಲು ಅನುಕೂಲಿಸುವುದು. ಆದುದರಿಂದ ಜನಹಿತ ದೃಷ್ಟಿ ಇಲ್ಲದ ಬಂಡವಾಳಶಾಹಿ-ಭೂಮಾಲಕ ಸರಕಾರವು ಕೊರತೆಯ ಪರಿಸ್ಥಿತಿಯಲ್ಲಿಯೂ ಆಮದುಮಾಡದೇ ರಫ್ತು ಮಾಡಲು ಆದೇಶ ನೀಡಬಹುದು!

ನಿಜವಾದ ತುಲನೆ-ಆಹಾರ ಸೇವನೆಯ ಪ್ರಮಾಣ

ಆದರೆ, ಸೋವಿಯತ್ ಯೂನಿಯನ್ ನಂತಹ ಸಮಾಜವಾದಿ ರಾಷ್ಟ್ರಗಳಲ್ಲಿ, ಆಹಾರ ಧಾನ್ಯಗಳಂತಹ ಜೀವನಾವಶ್ಯಕ ವಸ್ತುಗಳ ಬೆಲೆಗಳು ಸ್ಥಿರವಾಗಿಯೇ ಇರುವಂತೆ, ಜನಸಾಮಾನ್ಯರ ಗ್ರಾಹಕ ಶಕ್ತಿಗೆ ನಿಲುಕುವಂತೆ ಕ್ರಮಕೈಕೊಳ್ಳಲಾಗುವುದು. ನೆರೆ ಬರಗಾಲದಂತಹ ನೈಸರ್ಗಿಕ ಅನಾಹುತಗಳಿಂದ ಆಹಾರ ಧಾನ್ಯಗಳ ಉತ್ಪಾದನೆಯಲ್ಲಿ ಕೊರತೆ ಉಂಟಾದರೆ, ಬೆಲೆ ಏರಿಕೆಗೆ ಆಸ್ಪದ ಕೊಟ್ಟು ಜನರ ಆಹಾರ ಸೇವನೆಯಲ್ಲಿ ಕಡಿಮೆಗೊಳಿಸುವುದಿಲ್ಲ. ಬದಲು, ಬಂಡವಾಳಶಾಹಿ ರಾಷ್ಟ್ರಗಳೂ ಸೇರಿದಂತೆ ಎಲ್ಲಾ ದೇಶಗಳಿಂದ ಸಾಕಷ್ಟು ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಆಮದು ಮಾಡಿ ಆಂತರಿಕ ಮಾರುಕಟ್ಟೆಯಲ್ಲಿ ಸ್ಥಿರ ಬೆಲೆಗಳಲ್ಲಿ ಗ್ರಾಹಕರಿಗೆ ಸಾಕಷ್ಟು ಪ್ರಮಾಣದಲ್ಲಿ ಸರಬರಾಜುಗೊಳಿಸಲಾಗುವುದು.

ಆದುದರಿಂದ, ಒಂದು ದೇಶದ ಆರ್ಥಿಕ ಸಾಮರ್ಥ್ಯ, ಸಾಧನೆಗಳನ್ನು ಆ ದೇಶ ಆಹಾರಧಾನ್ಯಗಳನ್ನು ಆಮದು ಮಾಡುವುದರಿಂದಾಗಲೀ, ರಫ್ತು ಮಾಡುವುದರಿಂದಾಗಲೀ ನಿರ್ಣಯಿಸಲಾಗುವುದಿಲ್ಲ. ಬದಲು, ಆ ದೇಶದ ಆಹಾರ ಧಾನ್ಯಗಳ ಸೇವನೆಯ ಮಟ್ಟ ಎಷ್ಟು ಎಂಬುದು ಮುಖ್ಯವಾದ ವಿಷಯ. ಈ ಕೆಳಗಿನ ಕೋಷ್ಟಕದಲ್ಲಿ ಕೆಲವು ದೇಶಗಳ ದೈನಿಕ ಸರಾಸರಿ ಆಹಾರ ಸೇವನೆಯನ್ನು 'ಕೆಲೋರಿ' (ಆಹಾರಧಾನ್ಯಗಳ ಸೇವನೆಯಿಂದ ದೊರೆಯುವ ಶಕ್ತಿಯ ಅಳತೆ) ಲೆಕ್ಕದಲ್ಲಿ ಕೊಡಲಾಗಿದೆ:

ಚೀನಾದ ಆಹಾರ ಉತ್ಪಾದನೆಯು ಹಾಗೂ ಸೇವನೆಯು ವಾರ್ಷಿಕ ಏರಿಕೆಯ ದರವೂ ಜಾಗತಿಕ ದರಕ್ಕಿಂತಲೂ, ಅಭಿವೃದ್ಧಿ ಹೊಂದಿದ ದೇಶಗಳ ದರಕ್ಕಿಂತಲೂ ಹೆಚ್ಚಾಗಿದೆ! ಆದರೆ, ಭಾರತದ ಸರಾಸರಿ ಆಹಾರ ಸೇವನೆಯು ಪ್ರಪಂಚದಲ್ಲಿಯೇ ಅತ್ಯಂತ ಕೆಳಮಟ್ಟದ್ದಾಗಿದೆ. ಇಲ್ಲಿನ ಸರಾಸರಿ ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸರಾಸರಿಗಿಂತ ಕಡಿಮೆ ಆಗಿರುವುದಲ್ಲದೆ, ಏಷ್ಯಾದ ರಾಷ್ಟ್ರಗಳ ಸರಾಸರಿ(2276 ಕೆಲೋರಿ)ಗಿಂತಲೂ ಕಡಿಮೆಯಾಗಿದೆ. ಇಂದಿರಾಗಾಂಧಿಯ ಹಿಂದಿನ ಒಂದು ದಶಕದ ಆಳ್ವಿಕೆಯಲ್ಲಿ ಭಾರತದ ಸರಾಸರಿ ಆಹಾರ ಸೇವನೆಯು ಕಡಿಮೆ ಕಡಿಮೆ ಆಗುತ್ತಿರುವುದು ನಾಚಿಕೆಗೇಡು! ಬೆಲೆಏರಿಕೆಯಿಂದಾಗಿ, ಜನರ ಗ್ರಾಹಕ ಶಕ್ತಿಯು ಕ್ಷಯಿಸುತ್ತಿರುವಾಗ ಆಹಾರ ಧಾನ್ಯಗಳ ಆಮದು ಮಾಡದೆ ಇದ್ದ ಮಾತ್ರಕ್ಕೆ, ಸ್ವಲ್ಪಾಂಶ ರಫ್ತು ಮಾಡುತ್ತಿದ್ದ ಮಾತ್ರಕ್ಕೆ ಭಾರತವು ಸಮಾಜವಾದಿ ರಾಷ್ಟ್ರಗಳಾದ ರಷ್ಯಾ, ಚೀನಾಗಳಿಗಿಂತ ಮುಂದುವರಿದ, ಸ್ವಾವಲಂಭಿ ರಾಷ್ಟ್ರ ಎಂದು ಹೊಗಳಿಕೊಳ್ಳುವುದು ಹಾಸ್ಯಾಸ್ಪದ!

ದೈನಿಕ ಸರಕಾರಿ ಆಹಾರ ಸೇವನೆ (ಕೆಲೋರಿಯಲ್ಲಿ)

	1969–71	1972–74	1975–77
ಜಾಗತಿಕ ಸರಾಸರಿ	2540	2560	2590
ಅಭಿವೃದ್ಧಿ ಹೊಂದಿದ ದೇಶಗಳ ಸರಾಸರಿ	3309	3353	3373
ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಸರಾಸರಿ	2211	2233	2282
ಅಮೇರಿಕದ ಸಂಯುಕ್ತ ಸಂಸ್ಥಾನಗಳ (USA) ಸರಾಸರಿ	—	3507	3537
ಸೋವಿಯೆತ್ ಯೂನಿಯನ್ (USA) ಸರಾಸರಿ	—	3401	3443
ಚೀನಾದ ಸರಾಸರಿ	2225	2326	2439
ಬ್ರೆಝಿಲ್ ಸರಾಸರಿ	2520	2478	2522
ಭಾರತದ ಸರಾಸರಿ	2030	1979	1949

ಸಾಧಾರ : ಇಕನಾಮಿಕ್ಸ್ ಟೈಮ್ಸ್ : 21-1-81

ಭಾರತದಲ್ಲಿ ಅತ್ಯಲ್ಪ ಆಹಾರ ಸೇವನೆ

ಸೋವಿಯೆತ್ ಯೂನಿಯನ್‌ನ ಸರಾಸರಿ ಆಹಾರಸೇವನೆಯು ಅಮೇರಿಕದ ಸಂಯುಕ್ತ ಸಂಸ್ಥಾನಗಳ ಸರಾಸರಿಗಿಂತ ಸ್ವಲ್ಪ ಕಡಿಮೆಯಾಗಿದ್ದರೂ, ಅಭಿವೃದ್ಧಿ ಹೊಂದಿದ ದೇಶಗಳ ಸರಾಸರಿಗಿಂತ ಹೆಚ್ಚಾಗಿದೆ. ಭಾರತದ ನಂತರ ಸ್ವತಂತ್ರವಾದ, ಅತ್ಯಂತ ಹಿಂದುಳಿದ ಭಾರತಕ್ಕಿಂತ ಕಡಿಮೆ ಸರಾಸರಿ ವ್ಯವಸಾಯ ಭೂಮಿ ಇರುವ ಚೀನಾ, ಆಹಾರ ಸೇವನೆಯಲ್ಲಿ ಭಾರೀ ಮುಂದುವರಿದಿದೆ. ಈ ದೇಶದ ಸರಾಸರಿಯು ಅಭಿವೃದ್ಧಿ ಹೊಂದುತ್ತಿರುವ ದೇಶಗಳಿಗಿಂತ ಹೆಚ್ಚಾಗಿದೆ. ಜಾಗತಿಕ ಸರಾಸರಿಯನ್ನು ಸಮೀಪಿಸುತ್ತಿದೆ.

ಸಮಾಜವಾದಿ ರಾಷ್ಟ್ರಗಳೂ ಆಹಾರೋತ್ಪಾದನೆಯಲ್ಲಿ ಸ್ವಾವಲಂಬಿಗಳಾಗಬೇಕು ಮಹತ್ವದ ಸಾಧನೆ ತೋರಿಸಬೇಕು ಇಲ್ಲವಾದರೆ ಸಾಮ್ರಾಜ್ಯಶಾಹಿ ರಾಷ್ಟ್ರಗಳ ಒತ್ತಾಯಗಳಿಗೆ ಕುಟಿಲ ತಂತ್ರಗಳಿಗೆ ಬಲಿಯಾಗಬೇಕಾದೀತು ಎಂಬುದು ಪ್ರತ್ಯೇಕ ವಿಷಯ. ಆದರೆ, ಅವುಗಳ ಇದುವರೆಗಿನ ಸಾಧನೆಗಳು ಭಾರತಕ್ಕಿಂತ ಗೌಣ ಎಂದು ಡಂಗುರ ಸಾರುವುದು ತಿಳಿಗೇಡಿತನ. ಅದೂ ಪ್ರಪಂಚದಲ್ಲಿಯೇ ಅತ್ಯಂತ ಬಡರಾಷ್ಟ್ರವಾದ ಭಾರತದ ಪ್ರಧಾನಿಯೇ ಈ ಅಪಪ್ರಚಾರದ ಡೊಂಬರಾಟದಲ್ಲಿ ಭಾಗವಹಿಸುತ್ತಿರುವುದು ಶೋಚನೀಯ!

ಎಡಪಂಥೀಯರು ಕೇವಲ ವಿದೇಶಿ ತಂತ್ರಜ್ಞಾನವನ್ನು ವಿರೋಧಿಸುತ್ತಿರುವರೆ?

ಸಮಾಜವಾದಿ ರಾಷ್ಟ್ರಗಳೂ ಬಹುರಾಷ್ಟ್ರೀಯ ಸಂಸ್ಥೆಗಳಿಂದಲೂ ಇತರ ವಿದೇಶಿ ಮೂಲಗಳಿಂದಲೂ ತಾಂತ್ರಿಕ ನೆರವನ್ನು ಪಡೆಯುತ್ತಿರುವಾಗ, ಅಂತಹ ನೆರವನ್ನು ಭಾರತವೂ ಪಡೆಯುವುದನ್ನು ಎಡಪಂಥದವರು ವಿರೋಧಿಸುವುದೇಕೆ ಎಂದು ಇಂದಿರಾ ಗಾಂಧಿಯ ಸವಾಲು. ವಿದೇಶಿ ನೆರವಿನ ಪ್ರಯೋಜನವನ್ನು ಇಂದಿರಾ ಗಾಂಧಿ ಸಮಾಜವಾದವು ಮೊದಲೇ ಕಂಡುಕೊಂಡಂತೆ, ರಷ್ಯಾ, ಚೀನಾ ವಿಯಟ್ನಾಂ ಮೊದಲಾದ ಸಮಾಜವಾದಿ ರಾಷ್ಟ್ರಗಳೂ ಇತ್ತೀಚಿಗೆ ಕಂಡುಕೊಳ್ಳುತ್ತಿರುವುದರಿಂದ, ತನ್ನ ಸಮಾಜವಾದವು ಮಾರ್ಕ್ಸ್‌ವಾದಕ್ಕಿಂತ ಶ್ರೇಷ್ಠ ಎಂದು ಇಂದಿರಾಗಾಂಧಿಯ ಹೇಳಿಕೆ! ಆದರೆ, ಸತ್ಯ ಸಂಗತಿ ಏನು?

ಬಂಡವಾಳಶಾಹಿ ಪದ್ಧತಿಗೆ ಮಾತ್ರ ವಿರೋಧ

ಆಧುನಿಕ ಕೈಗಾರಿಕೆ ಹಾಗೂ ಆಧುನಿಕ ತಂತ್ರಜ್ಞಾನಗಳನ್ನು ತ್ಯಜಿಸಬೇಕೆಂದು ಪ್ರತಿಪಾದಿಸುವ ಗಾಂಧೀವಾದ ಮೊದಲಾದ ಪ್ರತಿಗಾಮಿ ಆದರ್ಶಗಳನ್ನೂ ಸಮಾಜವಾದ ವಿರೋಧಿಸುವುದು. ಪ್ರಕೃತಿಯ ಮೇಲೆ ಮಾನವನ ಪ್ರಭುತ್ವವನ್ನು ಉನ್ನತ ಶಿಖರಕ್ಕೇರಿಸುವ ಎಲ್ಲಾ ವಿಜ್ಞಾನ ತಂತ್ರಜ್ಞಾನಗಳನ್ನು ಸಮಾಜವಾದ ಸ್ವೀಕರಿಸುವುದು. ಬೃಹತ್ ಪ್ರಮಾಣದ ಉತ್ಪಾದನೆಯನ್ನು ಸಮಾಜವಾದ ಸ್ವಾಗತಿಸುವುದು. ಸಮಾಜವಾದ ಬಂಡವಾಳಶಾಹಿ ಉತ್ಪಾದನಾ ಸಂಬಂಧವನ್ನು, ಕೂಲಿ-ಯಜಮಾನ ಸಂಬಂಧವನ್ನು, ಖಾಸಗೀ ಲಾಭ ಮತ್ತು ಖಾಸಗೀ ಆಸ್ತಿಯನ್ನು ಮಾತ್ರ ವಿರೋಧಿಸುವುದು.

ಆಧುನಿಕ ತಂತ್ರಜ್ಞಾನಕ್ಕೆ ಸ್ವಾಗತ

ಬಂಡವಾಳಶಾಹಿ ಪದ್ಧತಿಯನ್ನು ಕಿತ್ತೊಗೆಯುವಾಗ ಸಮಾಜವಾದವು ತಂತ್ರಜ್ಞಾನವೂ ಸೇರಿದಂತೆ ಚಾರಿತ್ರಿಕವಾಗಿ ಪುರೋಗಾಮಿಯಾದವುಗಳೆಲ್ಲವನ್ನೂ ಸ್ವೀಕರಿಸುವುದು. ಆರ್ಥಿಕವಾಗಿ ಹಿಂದುಳಿದಿರುವ ಸಮಾಜಗಳಲ್ಲಿಯೇ ಸಮಾಜವಾದ ಪದ್ಧತಿಯು ಮುಂಚಿತವಾಗಿ ಬಂದುದರಿಂದ, ಸಹಜವಾಗಿಯೇ ಸಮಾಜವಾದಿ ರಾಷ್ಟ್ರಗಳು ಹೆಚ್ಚು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಿಂದ ಸೂಕ್ತ ತಂತ್ರಜ್ಞಾನವನ್ನು ಪಡೆಯಲು ಪ್ರಯತ್ನಿಸುತ್ತಿದ್ದವು. ಆದರೆ, ಬಂಡವಾಳಶಾಹಿ ರಾಷ್ಟ್ರಗಳು ಉದ್ದೇಶಪೂರ್ವಕವಾಗಿ ಸಮಾಜವಾದಿ ರಾಷ್ಟ್ರಗಳೊಂದಿಗೆ ಬಹುಕಾಲ ಆರ್ಥಿಕ, ತಾಂತ್ರಿಕ, ಸಾಂಸ್ಕೃತಿಕ ಸಂಪರ್ಕಗಳನ್ನು ಕಡಿದುಕೊಂಡಿದ್ದವು.

ಬಂಡವಾಳಶಾಹಿ ರಾಷ್ಟ್ರಗಳು ಸಮಾಜವಾದಿ ರಾಷ್ಟ್ರಗಳ ವಿರುದ್ಧ ವಿಧಿಸಿದ ಆರ್ಥಿಕ ದಿಗ್ಬಂಧನದಿಂದಾಗಿ ಜಾಗತಿಕ ಮಾರುಕಟ್ಟೆಯು ಸಂಕುಚಿತಗೊಂಡು ಬಂಡವಾಳಶಾಹಿ ರಾಷ್ಟ್ರಗಳು ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸಬೇಕಾಯಿತು. ಈ ಮಧ್ಯೆ, ಸಮಾಜವಾದಿ ರಾಷ್ಟ್ರಗಳು ಬಂಡವಾಳಶಾಹಿ ರಾಷ್ಟ್ರಗಳ ತಾಂತ್ರಿಕ ನೆರವಿಲ್ಲದೆಯೇ ಸರ್ವತೋಮುಖವಾಗಿ ಅಭಿವೃದ್ಧಿಹೊಂದಿ ಸ್ವಾವಲಂಬಿಯಾಗುತ್ತಾ ಬಂದವು. ಆಗ ಬಂಡವಾಳಶಾಹಿ ರಾಷ್ಟ್ರಗಳು ಅನಿವಾರ್ಯವಾಗಿ ತಮ್ಮ ಆರ್ಥಿಕ ಬಿಕ್ಕಟ್ಟನ್ನು ಹೋಗಲಾಡಿಸಲು ಶಕ್ತಿಯುತವಾದ ಸಮಾಜವಾದಿ ರಾಷ್ಟ್ರಗಳೊಂದಿಗೆ ಪುನಃ ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಸಂಬಂಧಗಳನ್ನಿಟ್ಟುಕೊಳ್ಳಬೇಕಾಯಿತು. ಆದುದರಿಂದ, ಇಂದು ಸಮಾಜವಾದಿ ರಾಷ್ಟ್ರಗಳು ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಿಂದ ಶ್ರೇಷ್ಠ ಮಟ್ಟದ ತಂತ್ರಜ್ಞಾನ ಪಡೆಯುವುದಾದರೆ, ಅದು ಸಮಾಜವಾದದ ಮೇಲ್ಗೈಯನ್ನೇ ತೋರಿಸುವುದು, ಬಂಡವಾಳಶಾಹಿ ರಾಷ್ಟ್ರದ ಮೇಲ್ಗೈಯನ್ನಲ್ಲ.

ವಿದೇಶಿ ತಾಂತ್ರಿಕ ನೆರವಿನಿಂದ, ಮುಖ್ಯವಾಗಿ ಬಹುರಾಷ್ಟ್ರೀಯ ಸಂಸ್ಥೆಗಳ ಸಂಪರ್ಕದಿಂದ ಸಮಾಜವಾದಿ ರಾಷ್ಟ್ರಗಳಿಗೆ "ಅಪಾಯ ಇಲ್ಲ ಎನ್ನುವಂತಿಲ್ಲ. ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಸಾಮ್ರಾಜ್ಯ ವಿಸ್ತರಿಸಲು, ಲಾಭಹೆಚ್ಚಿಸಲು, ತಾವು ಸಂಬಂಧ ಹೊಂದಿದ ಪ್ರತಿ ಒಂದು ದೇಶದ ಆರ್ಥಿಕ, ರಾಜಕೀಯ ಧೋರಣೆಗಳು ತಮ್ಮ ಹಿತಾಸಕ್ತಿಗಳಿಗನುಗುಣವಾಗಿರುವಂತೆ ಹಲವಾರು ವಿಧಗಳಲ್ಲಿ ತಮ್ಮ ಪ್ರಭಾವ ಬೀರುವುವು. ಈ ವಿಷಯ ಇತರ ದೇಶಗಳಿಗೆ ಎಷ್ಟು ಸತ್ಯವೋ, ಸಮಾಜವಾದಿ ರಾಷ್ಟ್ರಗಳಿಗೂ ಅಷ್ಟೇ ಸತ್ಯ.

ಆದರೆ, ಇಲ್ಲಿ ಒಂದು ಮುಖ್ಯ ವ್ಯತ್ಯಾಸವನ್ನು ಗಮನಿಸಬೇಕು. ಬಹುರಾಷ್ಟ್ರೀಯ ಸಂಸ್ಥೆಗಳ ತಾಂತ್ರಿಕ ನೆರವನ್ನು ಸಮಾಜವಾದಿ ರಾಷ್ಟ್ರಗಳು ತಮ್ಮ ಜನಹಿತಕ್ಕಾಗಿ ಬಳಸುವಷ್ಟು ಶಕ್ತಿಯುತವಾಗಿವೆ. ಅಂತಹ ಸಂಸ್ಥೆಗಳಿಂದ ತಮ್ಮ ಆಂತರಿಕ ಧೋರಣೆಗಳಿಗೆ, ರಕ್ಷಣೆಗೆ ಅಪಾಯವಿಲ್ಲದಂತೆ ಜಾಗೃತಿ ವಹಿಸಲು ಸಮರ್ಥವಾಗಿವೆ. ಸಮಾಜವಾದಿ ಸಮಾಜದಲ್ಲಿ ವಿದೇಶಿ ಬಂಡವಾಳ, ವಿದೇಶಿ ತಂತ್ರಜ್ಞಾನ, ಇವುಗಳಿಗೆ ರಾಷ್ಟ್ರೀಯ ಪುನರ್ರಚನೆ ಹಾಗೂ ಆಧುನೀಕರಣಗಳಿಗೆ ಒಟ್ಟು ರಾಷ್ಟ್ರೀಯ ಯೋಜನೆಯಲ್ಲಿ ಒಂದು ನಿರ್ದಿಷ್ಟ ಸ್ಥಾನ ಕೊಡಲಾಗುವುದು. ಸಮಾಜವಾದಿ ರಾಷ್ಟ್ರಗಳು ತಮಗೆ ಬೇಕಾದ ಕ್ಷೇತ್ರದಲ್ಲಿ, ತಮಗೆ ಸರಿಕಂಡ ಶರತ್ತುಗಳಲ್ಲಿ ವಿದೇಶಿ ಬಂಡವಾಳ, ತಂತ್ರಜ್ಞಾನಗಳನ್ನು ಪಡೆಯಲು ಸಮರ್ಥವಾಗಿದೆ.

ಬಂಡವಾಳಶಾಹಿ ಪದ್ಧತಿಯಲ್ಲಿ ವಿದೇಶಿ ನೆರವಿನಿಂದ ಅಪಾಯ

ಭಾರತದಂತಹ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ವಿದೇಶಿ ಬಂಡವಾಳ, ವಿದೇಶಿ ತಂತ್ರಜ್ಞಾನ ಬಂಡವಾಳಶಾಹಿಗಳ ಹಾಗೂ ಅವರು ಇನ್ನೂ ನಿಕಟವಾಗಿ ಸಂಬಂಧವಿರಿಸಿಕೊಂಡಿರುವ ಭೂಮಾಲಿಕರ ಹಿತಾಸಕ್ತಿಗಳಿಗಾಗಿಯೇ ವಿನಿಯೋಗವಾಗುವುದು. ಇಂತಹ ಆರ್ಥಿಕ ವ್ಯವಸ್ಥೆಯಲ್ಲಿ ಆರ್ಥಿಕ ಅಭಿವೃದ್ಧಿಗಾಗಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾರ್ವಜನಿಕ ಬಂಡವಾಳ ಹೂಡುವಿಕೆಗಾಗಿ ಅಪ್ರತ್ಯಕ್ಷ ತೆರಿಗೆ, ಕೊರತೆ ಹಣಸೃಷ್ಟಿ, ನಿರಂತರ ಹಣದುಬ್ಬರ, ವಿದೇಶಿ ನೆರವು ಇತ್ಯಾದಿ ಕ್ರಮಗಳನ್ನು ಅನುಸರಿಸಲಾಗುವುದು. ಬಂಡವಾಳಶಾಹಿಗಳ ಮತ್ತು ಭೂಮಾಲಿಕರ ಆಸ್ತಿ, ಆದಾಯ ಹೆಚ್ಚುತ್ತಾ ಹೋಗುವುವು. ಪರಿಣಾಮವಾಗಿ ಬಡತನ, ಬೆಲೆ ಏರಿಕೆ, ನಿರುದ್ಯೋಗ ಹೆಚ್ಚಿ ಜನಸಾಮಾನ್ಯರ ಗ್ರಾಹಕ ಶಕ್ತಿ ಕುಸಿಯುತ್ತಿದ್ದು, ಆಂತರಿಕ ಮಾರುಕಟ್ಟೆಯು ಕ್ಷಯಿಸುತ್ತಿರುವುದು. ಇಂತಹ ಪರಿಸ್ಥಿತಿಯಲ್ಲಿ ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನ ದೇಶೀಯ ಬಂಡವಾಳಶಾಹಿಗಳಿಗೆ ತಮ್ಮ ಕ್ಷಯಿಸುತ್ತಿರುವ ಆಂತರಿಕ ಮಾರುಕಟ್ಟೆಯನ್ನುಳಿಸಿಕೊಳ್ಳಲು ಹಾಗೂ ಲಾಭಗಳಿಗೆ ಮುಂದುವರಿಸಲು ವಿದೇಶಿ ಮಾರುಕಟ್ಟೆ ಗಿಟ್ಟಿಸಿಕೊಳ್ಳಲು ಅತ್ಯಗತ್ಯವಾಗುತ್ತದೆ.

ಆದರೆ, ವಿದೇಶಿ ಬಂಡವಾಳಶಾಹಿಗಳೂ ಬಹುರಾಷ್ಟ್ರೀಯ ಸಂಸ್ಥೆಗಳೂ ತಮ್ಮ ದೇಶಗಳ ಆರ್ಥಿಕ ಬಿಕ್ಕಟ್ಟುಗಳನ್ನು ನೀಗಿಸಲು ಹೊರದೇಶಗಳಲ್ಲಿ ಲಾಭದಾಯಕವಾದ ಮಾರುಕಟ್ಟೆಗಳಿಗಾಗಿ ಹೊಂಚುಹಾಕುತ್ತಿರುವುದರಿಂದ, ಅವುಗಳ ನೆರವು ನಮ್ಮ ಶರತ್ತುಗಳಲ್ಲಿ, ನಮ್ಮ ಜನರ ಅಗತ್ಯತೆಗಳಿಗಾಗಿ ದೊರೆಯಲಾರದು. ವಿದೇಶಿ ನೆರವನ್ನೇ ವಿಶೇಷವಾಗಿ ಅವಲಂಭಿಸುತ್ತಿರುವ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯು ಬಹುರಾಷ್ಟ್ರೀಯ ಸಂಸ್ಥೆಗಳ ಅಸಮಾನ ಶರತ್ತುಗಳಿಗೆ ಶರಣು ಹೋಗಬೇಕಾಗುವುದು.

ಅಸಮಾನ ಶರತ್ತುಗಳು

ಇಂತಹ ಪರಿಸ್ಥಿತಿಯಲ್ಲಿ ಇನ್ನಷ್ಟೂ ಆರ್ಥಿಕ ಹಾಗೂ ರಾಜಕೀಯ ಬಿಕ್ಕಟ್ಟುಗಳಿಗೆ ಕಾರಣವಾಗುವುದು. ಬಹುರಾಷ್ಟ್ರೀಯ ಸಂಸ್ಥೆಗಳೊಂದಿಗೆ ಮಾಡಿಕೊಳ್ಳುವ ಪ್ರತಿ ಒಂದು ಅಸಮಾನ ಶರತ್ತುಗಳಿಂದಾಗಿ, ಜನರ ಋಣಭಾರ, ಕರಭಾರ ಹೆಚ್ಚುವುದು. ಅವರ ಅಸಮಾಧಾನಗಳು ಹೋರಾಟಗಳಲ್ಲಿ ಭುಗಿಲೇಳುವುವು. ಅವುಗಳನ್ನು ಹತ್ತಿಕ್ಕಲು ಸರಕಾರವು ಸರ್ವಾಧಿಕಾರಿ ಧೋರಣೆಯನ್ನನುಸರಿಸತೊಡಗುವುದು. ಕಡಿಮೆ ವೇತನಮಟ್ಟವಿರುವ ಭಾರತದಂತಹ ಬಡದೇಶಗಳಲ್ಲಿನ ಕೈಗಾರಿಕೋತ್ಪಾದನೆಗಳನ್ನು ವಿದೇಶಿ ಮಾರುಕಟ್ಟೆಗಳಲ್ಲಿ ಹೆಚ್ಚು ಬೆಲೆಗೆ ವಿಕ್ರಯಿಸಿ ಅಧಿಕ ಲಾಭಗಿಟ್ಟಿಸಲು ಬಹುರಾಷ್ಟ್ರೀಯ ಸಂಸ್ಥೆಗಳು ದೇಶೀಯ ಬಂಡವಾಳಶಾಹಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಲು ಸರಕಾರ ಹೆಚ್ಚು ಹೆಚ್ಚು ನೆರವಾಗುವುದು. ಇಷ್ಟರಲ್ಲಿಯೇ, ಬಹುರಾಷ್ಟ್ರೀಯ ಸಂಸ್ಥೆಗಳು ತಮ್ಮ ಹಿತಾಸಕ್ತಿಗಳನ್ನು ರಕ್ಷಿಸಲು ನೆರವು ಪಡೆದ ದೇಶದ ಪ್ರಮುಖ ರಾಜಕೀಯ, ಆರ್ಥಿಕ ಅಧಿಕಾರ ಸ್ಥಾನಗಳಲ್ಲಿ ತಮ್ಮ ಆಪ್ತ ಪ್ರತಿನಿಧಿಗಳನ್ನಿರಿಸುವುವು. ದೇಶದ ಆರ್ಥಿಕ, ರಾಜಕೀಯ ಧೋರಣೆಗಳು ವಿದೇಶಿ ಬಂಡವಾಳಶಾಹಿಗಳ ಹಿತಾಸಕ್ತಿಗಳಿಗೆ ಅಧೀನವಾಗುತ್ತಾ ಬಂದು ಸ್ವಾತಂತ್ರ್ಯ, ಸ್ವಾವಲಂಬನೆಗಳಿಗೆ ತೀವ್ರ ಅಪಾಯ ಸಂಭವಿಸುವುದು.

ಆದುದರಿಂದ, ಭಾರತದ ಎಡಪಂಥದವರು ವಿರೋಧಿಸುತ್ತಿರುವುದು ವಿದೇಶಿ ಹಾಗೂ ಬಹುರಾಷ್ಟ್ರೀಯ ಸಂಸ್ಥೆಗಳ ಬಂಡವಾಳವಲ್ಲ, ತಂತ್ರಜ್ಞಾನವನ್ನಲ್ಲ. ಅವುಗಳನ್ನು ಜನವಿರೋಧಿ ಉದ್ದೇಶಗಳಿಗಾಗಿ ಬಳಸುತ್ತಿರುವುದನ್ನು ಮಾತ್ರ ವಿರೋಧಿಸುವುದು. ಭಾರತದಂತಹ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯಲ್ಲಿ ವಿದೇಶಿ ಬಂಡವಾಳ, ತಂತ್ರಜ್ಞಾನವನ್ನು ಸಮಾಜವಾದಿ ರಾಷ್ಟ್ರಗಳಂತೆ ಜನಪರವಾಗಿ ಮತ್ತು ರಾಷ್ಟ್ರೀಯ ಸ್ವಾವಲಂಬನೆ ಹಾಗೂ ಸ್ವಾತಂತ್ರ್ಯಗಳಿಗೆ ಅಪಾಯವಿಲ್ಲದೆ ಬಳಸಲು ಅಸಾಧ್ಯವಾದುದರಿಂದ ಅವುಗಳನ್ನು ವಿರೋಧಿಸಲಾಗುತ್ತಿದೆ.

ಚೀನಾದ ಅನುಭವ

ಉದಾಹರಣೆಗೆ ಚೀನಾ ಮತ್ತು ಭಾರತದ ಅನುಭವಗಳನ್ನು ಹೋಲಿಸಿ ನೋಡುವ. ಚೀನಾದಲ್ಲಿ ಕ್ರಾಂತಿಯಾಗಿ 30 ವರ್ಷಗಳ ನಂತರ, 1980ರಲ್ಲಿ ಮೊತ್ತಮೊದಲು 10 ಕೋಟಿ ಡಾಲರ್‌ಗಳಷ್ಟು ವಿದೇಶಿ ಬಂಡವಾಳ ಪಡೆಯಲಾಯಿತು. ಇದನ್ನು ಸಹಕಾರಿಕ್ಷೇತ್ರ ಮತ್ತು ಜಂಟಿಕ್ಷೇತ್ರಗಳಲ್ಲಿ ಬಳಸಲಾಗುತ್ತಿದೆ. ಸಹಕಾರಿಕ್ಷೇತ್ರದಲ್ಲಿ ವಿದೇಶಿ ಬಂಡವಾಳ ಪಡೆಯುವ ಸಂಸ್ಥೆಗಳು ಸಂಪೂರ್ಣವಾಗಿ ವಿದೇಶಿ ಬಂಡವಾಳವನ್ನೇ ಅವಲಂಬಿಸಬೇಕು. ಇಂತಹ ಎಲ್ಲಾ ಸಂಸ್ಥೆಗಳನ್ನು 10-20 ವರ್ಷಗಳಲ್ಲಿ ಚೀನಾ ಸರಕಾರಕ್ಕೇ ಬಿಟ್ಟುಕೊಡಬೇಕು. ಜಂಟಿಕ್ಷೇತ್ರದಲ್ಲಿನ ಸಂಸ್ಥೆಗಳು ಕನಿಷ್ಟ ಶೇ. 25ರಷ್ಟು ವಿದೇಶಿ ಬಂಡವಾಳ ಹೊಂದಿರಬೇಕು. ಅಂತಹ ಸಂಸ್ಥೆಗಳ ಆಡಳಿತ ಮಂಡಳಿಯ ಅಧ್ಯಕ್ಷ ಚೀನಾ ಸರಕಾರದ ಪ್ರತಿನಿಧಿಯೇ ಆಗಿರಬೇಕು. ಬಹುರಾಷ್ಟ್ರೀಯ ಸಂಸ್ಥೆಗಳು ದೇಶಿಯ ತಜ್ಞರನ್ನು ನಿಯಮಿತ ಅವಧಿಯಲ್ಲಿ ತರಬೇತುಗೊಳಿಸಬೇಕು. ಚೀನಾದಲ್ಲಿ ಅತ್ಯಧಿಕ ವಿದೇಶಿ ಬಂಡವಾಳವಿರುವ ಸಂಸ್ಥೆಗಳ ನಿಯಂತ್ರಣವೂ ಸಂಪೂರ್ಣವಾಗಿ ಸರಕಾರದೊಡನೇ ಇರುವುದು. ಭಾರತದಲ್ಲಿ ಅತ್ಯಲ್ಪ ವಿದೇಶಿ ಬಂಡವಾಳವಿರುವ ಸಂಸ್ಥೆಗಳ ನಿಯಂತ್ರಣವೂ ವಿದೇಶಿಯರೊಡನೇ ಇರುವುದು!

ಭಾರತದ ಅನುಭವ

ಭಾರತದಲ್ಲಿ ಸ್ವಾತಂತ್ರ್ಯಪೂರ್ವದಲ್ಲಿಯೇ ಸಾಕಷ್ಟು ಬ್ರಿಟಿಷ್ ಬಂಡವಾಳವಿತ್ತು. ಆಮೇಲೆ, ಅಮೇರಿಕ, ಯುರೋಪ್, ಜಪಾನ್ ಮೊದಲಾದ ಬಂಡವಾಳಶಾಹಿ ರಾಷ್ಟ್ರಗಳಿಂದ ಭಾರೀ ಪ್ರಮಾಣದಲ್ಲಿ ವಿದೇಶಿ ಬಂಡವಾಳಬರಲಾರಂಭವಾಯಿತು. ಭಾರತದಲ್ಲಿಯೂ ವಿದೇಶಿ ಬಂಡವಾಳ ಮತ್ತು ತಂತ್ರಜ್ಞಾನ ಘನಉದ್ಯಮಕ್ಕೆ ಸಿಗದೆ, ವ್ಯಾಪಾರ, ಅಲ್ಪಾವಧಿಯಲ್ಲಿ ಅಧಿಕ ಲಾಭಗಳಿಸುವ ಕೈಗಾರಿಕೆ ಇತ್ಯಾದಿಗಳಿಗೇ ಬಳಸಲಾಗುತ್ತಿದೆ. ಭಾರತ ಸರಕಾರ ಜಂಟಿಕ್ಷೇತ್ರದಲ್ಲಿ ಶೇ. 40ಕ್ಕಿಂತ ಹೆಚ್ಚು ಆಗದಷ್ಟು ವಿದೇಶಿ ಬಂಡವಾಳ ಹೂಡಬಹುದೆಂದು ನಿರ್ದೇಶಿಸಿದೆ. ವಿದೇಶಿ ಬಂಡವಾಳ ಹೂಡಿರುವ ಹೆಚ್ಚಿನ ಸಂಸ್ಥೆಗಳು ಖಾಸಗೀ ಕ್ಷೇತ್ರದಲ್ಲಿವೆ. ಇವುಗಳನ್ನು ರಾಷ್ಟ್ರೀಕರಣಗೊಳಿಸುವುದಿಲ್ಲ ಎಂದು ಸರಕಾರ ಭರವಸೆ ಇತ್ತಿದೆ. ಈ ಸಂಸ್ಥೆಗಳಲ್ಲಿ ಸರಕಾರದ ನಿಯಂತ್ರಣ ಅತ್ಯಲ್ಪ. ದೇಶೀಯ ತಜ್ಞರನ್ನು ತರಬೇತುಗೊಳಿಸುವ ಶರತ್ತುಗಳೂ ವಿರಳ. ಇವುಗಳ ಆಡಳಿತದಲ್ಲಿ ವಿದೇಶಿ ಬಂಡವಾಳದ ಹಿತಾಸಕ್ತಿಗಳನ್ನು ಸಂರಕ್ಷಿಸುವ ಅಧಿಕಾರಿಗಳೇ ಹೆಚ್ಚಾಗಿ ಇದ್ದಾರೆ. ದೇಶದ ಆರ್ಥಿಕ ಯೋಜನೆಯು ಅಧಿಕವಾಗಿ ವಿದೇಶಿ ನೆರವನ್ನು ಅವಲಂಬಿಸಿದೆ. ದೇಶದ ಆರ್ಥಿಕ ನೀತಿಯು, ರಫ್ತು, ಆಮದು, ರೂಪಾಯಿಯ ಮೌಲ್ಯ ಇತ್ಯಾದಿ ವಿಷಯಗಳು ನೆರವು ನೀಡಿರುವ ವಿದೇಶಿ ಸರಕಾರಗಳ, ಜಾಗತಿಕ ಹಣಕಾಸು ಸಂಸ್ಥೆಗಳ, ಬಹುರಾಷ್ಟ್ರೀಯ ಸಂಸ್ಥೆಗಳ ಪ್ರಭಾವಕ್ಕೊಳಗಾಗಿವೆ.

ವಿದೇಶಿ ಬಂಡವಾಳ ಶಾಶ್ವತವಾಗಿರಿಸಲು ವಿರೋಧ

ಇಂದಿರಾಗಾಂಧಿಯ 'ಮಿಶ್ರ ಆರ್ಥಿಕ ನೀತಿ'ಯ ಸಮಾಜವಾದದಲ್ಲಿ ವಿದೇಶಿ ಬಂಡವಾಳ ಹಾಗೂ ತಂತ್ರಜ್ಞಾನದ ಪ್ರಯೋಜನಗಳನ್ನು ಪಡೆಯುವುದಕ್ಕಿಂತಲೂ ಅವುಗಳು ದೇಶದ ಆರ್ಥಿಕ ವ್ಯವಸ್ಥೆಯಲ್ಲಿ ಶಾಶ್ವತವಾಗಿರುವಂತೆ, ತಮ್ಮ ಹಿತಾಸಕ್ತಿಗಳನ್ನು ಅನಿರ್ಬಂಧಿತವಾಗಿ ಬೆಳೆಸಿಕೊಳ್ಳುವಂತೆ ಅನುಕೂಲ ಮಾಡಿಕೊಡಲಾಗುತ್ತಿದೆ. ಎಡಪಂಥೀಯರು ಇದನ್ನೇ ಪ್ರಬಲವಾಗಿ ವಿರೋಧಿಸುತ್ತಿರುವುದು.

೩. ಮಿಶ್ರ ಆರ್ಥಿಕನೀತಿಯ ಸಾಧನೆಗಳೇನು ?

'ಮಿಶ್ರ ಆರ್ಥಿಕ ನೀತಿ'ಯು ಸಮಾಜವಾದದ ಗುರಿಗೆ ಅಸಮಂಜಸವೇನೂ ಅಲ್ಲ. ಬದಲು ಅದು ಆ ಗುರಿಯನ್ನು ಸೇರಲು ನಿಶ್ಚಿತಮಾರ್ಗ. ಈ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರಕ್ಕೆ (public sector) ಪ್ರಧಾನ ಪಾತ್ರ ಬಿಟ್ಟುಕೊಟ್ಟು, ಸಮಾಜದ ಅತ್ಯಂತ ಹೆಚ್ಚಿನ ಒಳಿತಿಗಾಗಿ ಆರ್ಥಿಕ ವ್ಯವಸ್ಥೆಯನ್ನು ಆಧುನೀಕರಣಗೊಳಿಸಲು ಖಾಸಗೀ ಕ್ಷೇತ್ರಕ್ಕೆ (private sector) ತುಂಬು ಪ್ರೋತ್ಸಾಹ ನೀಡಲಾಗುವುದು. ಇಂತಹ ಪ್ರತ್ಯಕ್ಷ ಫಲಕಾರಿ ಧೋರಣೆಯನ್ನು ಸಮಾಜವಾದಿ ರಾಷ್ಟ್ರಗಳೂ ಅನುಸರಿಸುತ್ತಿರುವುದರಿಂದ ನಮ್ಮ ಸಮಾಜವಾದವೇ ಶ್ರೇಷ್ಠ ಎಂದು ಇಂದಿರಾಗಾಂಧಿಯ ವಾದ.

[7ನೇ ಪುಟ ನೋಡಿ]

'ರಾಷ್ಟ್ರೀಯ ಪರ್ಯಾಯ' - ಬಿ.ಜೆ.ಪಿ.ಯ ಮುಂಗಾಟಗಳು

(3ನೇ ಪುಟದಿಂದ)

ಎಡ, ಪ್ರಜಾಪ್ರಭುತ್ವವಾದೀ ಪಕ್ಷಗಳು ಹಾಗೂ ಗುಂಪುಗಳ ಸಂಯುಕ್ತ ರಂಗಗಳಿಗಿಂತಲೂ ಹೆಚ್ಚು ವಿಶಾಲವಾದ ತಳಹದಿಯ ಮೇಲೆ ಒಂದಾಗಿ ನಿಜವಾಗಿಯೂ ಜನಪರವಾದ, ವಿದೇಶಿ ಗುತ್ತೇದಾರರು, ಭಾರತದ ದೊಡ್ಡ ವ್ಯಾಪಾರೋದ್ಯಮಿಗಳು ಹಾಗೂ ದೇಶದ ಎಲ್ಲಾ ರೀತಿಯ ಭೂಮಾಲಕತ್ವಕ್ಕೆ ವಿರುದ್ಧವಾದ ಪರ್ಯಾಯ ಧೋರಣೆ ಹಾಗೂ ಕಾರ್ಯಕ್ರಮಗಳನ್ನು ರೂಪಿಸಿಕೊಂಡಾಗ ಮಾತ್ರ ಸಾಧ್ಯ. ಜನವಿರೋಧಿ, ಸಂಕುಚಿತವಾದೀ ಹಾಗೂ ಅಗ್ಗದ ಮಾತಿನ ಧೋರಣೆಗಳಿಂದ ಬಿ.ಜೆ.ಪಿ. ಇಂತಹ ಪರ್ಯಾಯವನ್ನು ಕೊಡಬಹುದೆನ್ನುವ ಮಾತು ತೀರಾ ಹಾಸ್ಯಾಸ್ಪದ. ತನ್ನ ಸರ್ವಾಧಿಕಾರೀ ಪ್ರವೃತ್ತಿಯಿಂದಾಗಿ ಪ್ರಜಾಪ್ರಭುತ್ವವಾದೀ ಜನತೆಯ ವಿಶ್ವಾಸವನ್ನು ಕಳಕೊಂಡ ಜನತಾಪಕ್ಷವೂ ಈ ರೀತಿಯ ಪರ್ಯಾಯ ಪಕ್ಷವಾಗದು.

ಬಿ. ಜೆ. ಪಿ. ಯ ಆಳುವವರ್ಗದ ಧೋರಣೆಗಳನ್ನು ಸಿ.ಪಿ.ಐ.(ಎಂ) ಯಾವಾಗಲೂ ವಿರೋಧಿಸುತ್ತದೆ. ಅಲ್ಲದೆ ನಿಜವಾದ 'ಪರ್ಯಾಯ ಶಕ್ತಿ'ಯಾಗಬಲ್ಲ ಎಡ ಮತ್ತು ಪ್ರಜಾಪ್ರಭುತ್ವವಾದೀ ರಂಗವನ್ನು ರೂಪಿಸುವತ್ತ ಸಿ.ಪಿ.ಐ.(ಎಂ) ಇತರ ಎಡ ಹಾಗೂ ಪ್ರಜಾಪ್ರಭುತ್ವವಾದಿಗಳ ಸಹಕಾರದೊಂದಿಗೆ ಸತತ ಪ್ರಯತ್ನ ನಡೆಸುತ್ತಿದೆ. ಆದ್ದರಿಂದಲೇ ಇಂದಿರಾ ಗಾಂಧಿಯವರಂತೆ ಬಿ. ಜೆ. ಪಿ. ಯವರಿಗೂ ಮಾರ್ಕ್ಸ್‌ವಾದಿಗಳ ಮೇಲೆ ದ್ವೇಷ. ಏಕಸ್ವಾಮ್ಯವಾದೀ ಪತ್ರಿಕೆಗಳು ಇಂತಹ ಎಡ ಹಾಗೂ ಪ್ರಜಾಪ್ರಭುತ್ವವಾದೀ ಪರ್ಯಾಯ ರೂಪಿತವಾದಂತೆ ತಮಗೆ ಕೇಡುಗಾಲ ಬಂದಂತೆ ಎಂದುಕೊಂಡು ವಾಜಪೇಯಿಯವರನ್ನು, ಬಿ.ಜೆ.ಪಿ.ಯನ್ನು ಎತ್ತಿ ಹಿಡಿದು ಪ್ರಚಾರ ಕೊಡುತ್ತಿದ್ದಾರೆ.

ಬಿ.ಜೆ.ಪಿ. ತನ್ನ ಆರೆಸ್ಸೆಸ್ ಸಂಬಂಧದಿಂದಾಗಿ ಜನರ ಮೇಲೆ ರಾಜಕೀಯ ಪ್ರಭಾವಬೀರಲು ಸಾಧ್ಯವಾಗುತ್ತಿಲ್ಲ, ಕೇರಳದಂತಹ ರಾಜ್ಯಗಳಲ್ಲಂತೂ ಇದು ಇನ್ನಷ್ಟು ಕಷ್ಟ ಎಂದು ಈ ಏಕಸ್ವಾಮ್ಯವಾದೀ ಪತ್ರಿಕೆಗಳ ಒಡೆಯರಿಗೂ, ಬಿ.ಜೆ.ಪಿ. ನಾಯಕರಿಗೂ ಗೊತ್ತಿದೆ. ಕೇರಳದ ಜನತೆ ಎಡ ಹಾಗೂ ಜಾತ್ಯತೀತ ಒಲವಿನವರು, 40%ರಷ್ಟು ಜನ ಹಿಂದೂಗಳಲ್ಲ ಹಾಗೂ ಹಿಂದೂಗಳಲ್ಲಿಯೂ ಬಹುಸಂಖ್ಯಾತರು ದಲಿತ ಜಾತಿಗಳಿಗೆ ಸೇರಿದವರು. ಆದ್ದರಿಂದ ಆರ್.ಎಸ್.ಎಸ್.ನ 'ಹಿಂದೂ ರಾಷ್ಟ್ರ', 'ಪ್ರಾಚೀನ ಸಂಸ್ಕೃತಿ' ಇತ್ಯಾದಿಗಳನ್ನು ಬಿ.ಜೆ.ಪಿ. ಬಿಟ್ಟುಬಿಡಬೇಕೆಂದು ಅವರು ನಿರೀಕ್ಷಿಸುತ್ತಾರೆ. ಈ ಹಿನ್ನೆಲೆಯಲ್ಲೇ ಪತ್ರಿಕೆಗಳಲ್ಲಿ ಪ್ರಕಟವಾದ "ಸಿ.ಪಿ.ಐ.(ಎಂ)ನ ಕೇಳಿಕೆ"ಯನ್ನು ಜಾಣ್ಮೆಯಿಂದ ಉಪಯೋಗಿಸಿಕೊಳ್ಳಲು ಬಿ.ಜೆ.ಪಿ.ಯನ್ನಿಸಿದ್ದು. ಈ ರೀತಿಯ "ಕೇಳಿಕೆ"ಯನ್ನು ವಿಕೃತ ಸಮಾಚಾರವನ್ನು ದೊಡ್ಡ ಪತ್ರಿಕೆಗಳವರು ಬೇಕೆಂದೇ ಪ್ರಚಾರ ಮಾಡಿದ್ದರು. ಆಶ್ಚರ್ಯವೆಂದರೆ ಏಕಸ್ವಾಮ್ಯವಾದೀ ದೊಡ್ಡ ಪತ್ರಿಕೆಗಳ ಕುಹಕತನದ, ಬೂರ್ಜ್ವಾ ನಾಯಕರುಗಳ ಕುಟಿಲತನದ ಅನುಭವವಿರುವ ಸಿ.ಪಿ.ಐ.ನಂತಹ ಪಕ್ಷಗಳೂ ಈ ವಿಕೃತ ಸುದ್ದಿಯನ್ನು ನಂಬಿದ್ದಾರೆ. (ಸಿ.ಪಿ.ಐ. ನ ಕೇರಳ ರಾಜ್ಯಸಮಿತಿ ತನ್ನ ಒಂದು ನಿರ್ಣಯದಲ್ಲಿ ಈ ಸುದ್ದಿಯ ಆಧಾರದ ಮೇಲೆ ಸಿ.ಪಿ.ಐ.(ಎಂ)ನ್ನು ಕಟುವಾಗಿ ಟೀಕಿಸಲಾಯಿತು ಎಂದು ಕೆಂಬಾವುಟ (10-5-81ರ ಸಂಚಿಕೆ) ವರದಿಮಾಡಿದೆ.

ಈಗಾಗಲೇ ಸಿ.ಪಿ.ಐ.(ಎಂ) ನ ಪೊಲಿಟ್‌ಬ್ಯೂರೋ ಸ್ಪಷ್ಟೀಕರಿಸಿರುವಂತೆ ಸಿ.ಪಿ.ಐ.(ಎಂ) ರಾಜಕೀಯ ಸಹಕಾರದ ಬಗ್ಗೆ ಯಾವ ಕೇಳಿಕೆಯನ್ನೂ ಬಿ.ಜೆ.ಪಿ.ಯ ಮುಂದಿಟ್ಟಿಲ್ಲ. ಕಾಂಗ್ರೆಯೇತರ ಸರಕಾರಗಳನ್ನು ಉರುಳಿಸುವ ಹಾಗೂ ಇಂತಹ ಇತರ ಕಾಂಗ್ರೆಸ್ (ಐ) ಸರ್ವಾಧಿಕಾರೀ ಕ್ರಮಗಳನ್ನು ವಿರೋಧಿಸುವಲ್ಲಿ ಎಲ್ಲಾ ಸರ್ವಾಧಿಕಾರೀ ವಿರೋಧಿ ಶಕ್ತಿಗಳೂ ಜೊತೆಗೂಡಬೇಕೆಂದಷ್ಟೇ ಅದು ಕರೆ ನೀಡಿತ್ತು. ಕೇರಳದ ಸಂದರ್ಭದಲ್ಲಿ, ಈ ಕರೆಯ ಅರ್ಥ ಕಾಂಗ್ರೆಸ್ (ಐ) ನಿಂದ ಇತರ ವಿರೋಧ ಪಕ್ಷಗಳು ದೂರಸರಿಯಬೇಕೆಂದೇ ಆಗುತ್ತದೆ. ಆದರೆ ಬಿ.ಜೆ.ಪಿ. ನಾಯಕರು ಇದಕ್ಕೆ ತಯಾರಿಲ್ಲ ಮಾತ್ರವಲ್ಲ ಎಡ ಪ್ರಜಾಪ್ರಭುತ್ವವಾದೀ ರಂಗ ವಿರೋಧಿ ನಿಲುವನ್ನೂ ಕಾಂಗ್ರೆಸ್ (ಐ)ನೊಂದಿಗೆ ತನ್ನ ಮಿತ್ರತ್ವವನ್ನೂ ಮುಂದುವರೆಸುತ್ತಿದ್ದಾರೆ.

○

ರೇಷ್ಮೆ ಸಂಶೋಧನ ಸಂಸ್ಥೆಯಲ್ಲಿ ಬೀಗಮುದ್ರೆ

ಮೈಸೂರು ನಗರದ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ಶಿಕ್ಷಣಾಲಯದ ಅಧಿಕಾರಿಗಳು ಸಂಸ್ಥೆಗೆ 29-4-81ರಿಂದ ಬೀಗಮುದ್ರೆ ಘೋಷಿಸಿದ್ದಾರೆ. ಕೇಂದ್ರ ಸರಕಾರದ ರೇಷ್ಮೆ ಮಂಡಲಿ ಒಡೆತನದ ಸಂಸ್ಥೆಯಲ್ಲಿ ಕಳೆದ ಆರು ತಿಂಗಳಿಂದ ಎಲ್ಲ ಕಾನೂನುಗಳನ್ನು ಧಿಕ್ಕರಿಸಿ, ಕಾರ್ಮಿಕರಿಗೆ ನಾನಾ ರೀತಿಯ ಕಿರುಕುಳ ಕೊಡುತ್ತಿರುವ ಅಧಿಕಾರಿಗಳು ನೌಕರರ ಸಂಘದ 14 ಜನ ಪದಾಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದಾರೆ. ಈಗ ಸಂಸ್ಥೆಗೆ ಭಾಗಶಃ ಬೀಗಮುದ್ರೆ ಘೋಷಿಸಿ, ಸಂಘದ ಕೆಲವು ಸಕ್ರಿಯ ಸದಸ್ಯರಿಗೆ ಮಾತ್ರ ಬೀಗಮುದ್ರೆ ಅನ್ವಯಿಸುವಂತೆಮಾಡಿ ಕೆಲಸದಿಂದ ತಡೆಹಿಡಿದಿದ್ದಾರೆ.

ಅಧಿಕಾರಿಗಳ ಈ ಕಾನೂನುಬಾಹಿರ ಕ್ರಮಗಳನ್ನು, ಕಾರ್ಮಿಕರ ಸಂಘಟನಾ ಹಕ್ಕುಗಳ ಮೇಲೆ ನಡೆಸಿರುವ ಆಕ್ರಮಣವನ್ನು ಕಾರ್ಮಿಕಸಂಘದ ಸಭೆ ಖಂಡಿಸಿದೆ. ಅಲ್ಲದೇ ಕಾರ್ಮಿಕ ವಿರೋಧಿ ಧೋರಣೆಗಳನ್ನು ಕೈಬಿಡುವಂತೆ ಸಂಘದ ಅಧ್ಯಕ್ಷ ಕಾಂ. ಮೋಹನ್‌ಕುಮಾರ್ ಒತ್ತಾಯಿಸಿದ್ದಾರೆ.

○

"ಕೆಂಬಾವುಟದ" ಕುತ್ಸಿತ ಪ್ರಚಾರ

ಭಾರತ ಕಮ್ಯುನಿಸ್ಟ್ ಪಕ್ಷದ ಮುಖಪತ್ರಿಕೆಯಾದ ಕೆಂಬಾವುಟ ಆಗಿಂದಾಗ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮೇಲೆ ಸಿ.ಐ.ಟಿ.ಯು. ಮೇಲೆ ಕುತ್ಸಿತ ಪ್ರಚಾರ ಮಾಡುತ್ತಿದೆ. ದೇಶದಲ್ಲೆಲ್ಲ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳ ಐಕ್ಯತೆ ಬಲಿಷ್ಠವಾಗುತ್ತಿರುವಾಗ ಈ ರೀತಿಯ ಕುತ್ಸಿತ ಅಪಪ್ರಚಾರಗಳು ಐಕ್ಯತೆಗೆ ಖಂಡಿತ ಸಹಕಾರಿಯಾಗಲಾರದು.

ಇತ್ತೀಚಿನ ಕೆಂಬಾವುಟ (17-5-81)ದಲ್ಲಿ "ಸೀಟೂ ಕಾರ್ಮಿಕರು ಎ.ಐ.ಟಿ.ಯು.ಸಿ.ಗೆ" ಎಂಬ ಶಿರೋನಾಮೆಯಲ್ಲಿ ಪ್ರಕಟವಾದ ವರದಿ ಅಪಪ್ರಚಾರಕ್ಕೆ ತಕ್ಕ ನಿದರ್ಶನ.

ಪ್ರೊಸೆಷನ್ ಸ್ಟೀಲ್ ಎಂಬುದು ತುಮಕೂರು ರಸ್ತೆಯಲ್ಲಿರುವ ಒಂದು ಚಿಕ್ಕ ಕಾರ್ಖಾನೆ. ಸುಮಾರು 70-80 ಕಾರ್ಮಿಕರು ಈ ಫ್ಯಾಕ್ಟರಿಯಲ್ಲಿ ಕೆಲಸ ಮಾಡುತ್ತಿದ್ದರು. ಈ ಕಾರ್ಮಿಕರು ಎ.ಐ.ಟಿ.ಯು.ಸಿ. ಅಡಿಯಲ್ಲಿ ಸಂಘಟಿತರಾಗಿದ್ದರು. 1978ರಲ್ಲಿ ಯೂನಿಯನ್ ಒಪ್ಪಂದ ಮಾಡಿಕೊಂಡಿತ್ತು. ಈ ಒಪ್ಪಂದದ ಬಗ್ಗೆ ಅಸಂತೃಪ್ತಿ ವ್ಯಕ್ತಪಡಿಸಿದ್ದ ಕಾರ್ಮಿಕರು ಸಿ. ಐ. ಟಿ.ಯು. ಗೆ ಸೇರಲು ಅಪೇಕ್ಷೆ ವ್ಯಕ್ತಪಡಿಸಿದ್ದರು. ಎ. ಐ. ಟಿ. ಯು. ಸಿ. ನೇತೃತ್ವದ ಸಂಘಟನೆಯಾದ್ದರಿಂದ ಮಧ್ಯೆ ಪ್ರವೇಶಿಸಲು ಸ್ಥಳೀಯ ಸಿ.ಐ. ಟಿ.ಯು. ಮುಖಂಡರು ಕಾರ್ಮಿಕರು ತುಂಬ ಒತ್ತಾಯ ಮಾಡಿದ್ದರೂ ಹಿಂಜರಿದಿದ್ದರು. ಕೊನೆಗೆ ಅನಿವಾರ್ಯವಾಗಿ ಸಿ.ಐ.ಟಿ.ಯು. ನೇತೃತ್ವದ ಸಂಘಕ್ಕೆ ಸೇರಿಸಿಕೊಳ್ಳಲಾಯಿತು.

ಈ ಹಿಂದೆಯೂ ಯಶವಂತಪುರ ವಿಭಾಗದ ಎ.ಐ.ಟಿ.ಯು.ಸಿ. ನೇತೃತ್ವದ ಕೆಲವು ಸಂಘಗಳು ಸಿ.ಐ. ಟಿ. ಯು. ಗೆ ಸೇರಲು ಇಷ್ಟಪಟ್ಟಿದ್ದರೂ ಮಧ್ಯಪ್ರವೇಶಿಸಿರಲಿಲ್ಲ.

ಮೇಲ್ಕಂಡ ಪ್ರೊಸೆಷನ್ ಸ್ಟೀಲ್ ಕಾರ್ಮಿಕರು ಸಿ.ಐ.ಟಿ.ಯು.ಗೆ ಸೇರಿದ ತಕ್ಷಣ ಎ.ಐ.ಟಿ.ಯು.ಸಿ.ಯವರು ಮಾಲೀಕರೊಂದಿಗೆ ಜೊತೆಗೂಡಿ ಲಾಕ್‌ಔಟ್‌ಗೆ ಕಾರಣರಾದರು.

ಕೆಂಬಾವುಟದ ವರದಿಯೇ ತಿಳಿಸಿರುವಂತೆ, ಕಾರ್ಮಿಕರು ಸಿ.ಐ.ಟಿ.ಯು. ವಿನಿಂದ ಮತ್ತೆ ಎ.ಐ.ಟಿ.ಯು.ಸಿ.ಗೆ ಸೇರಿದಾಗ ಎಂಟು ತಿಂಗಳಿಂದ ಮುಚ್ಚಿದ್ದ ಆ ಕಾರ್ಖಾನೆ ತೆಗೆಯಲಾಯಿತು. ಈ ಘಟನೆಯ ತೆರೆಯಲ್ಲಿ ಎ.ಐ.ಟಿ.ಯು.ಸಿ.ಯ ಪಾತ್ರ ಸ್ಪಷ್ಟವಾಗುವದು. ಹಿಂದೆ ಬೆಂಗಳೂರಿನ ಉಷಾ ಮಾರ್ಟಿನ್ ಬ್ಲ್ಯಾಕ್, ಏಷ್ಯಾಟಿಕ್ ಆಕ್ಸಿಜನ್, ಗ್ರಾಫಾಯಿಟ್ ಇಂಡಿಯಾ (ಕಾಂಟ್ರಾಕ್ಟ) ಕಾರ್ಖಾನೆಗಳಲ್ಲಿ ಕಾರ್ಮಿಕರು ಸಿ.ಐ.ಟಿ.ಯು. ವಿನತ್ತ ಒಲವು ತೋರಿದಾಗ ಎ.ಐ. ಟಿ.ಯು.ಸಿ. ಇದೇ ಹೊಲಸು ತಂತ್ರ ಅನುಸರಿಸಿತ್ತು.

ಹರಿಹರ ಕಿರ್ಲೋಸ್ಕರ ಫ್ಯಾಕ್ಟರಿಯಲ್ಲಿ ಇತ್ತೀಚೆಗೆ ಕಾರ್ಮಿಕ ಸಂಘದ ಚುನಾವಣೆಗಳು ನಡೆದಾಗ ಎ.ಐ.ಟಿ.ಯು.ಸಿ. ಪ್ರತ್ಯಕ್ಷವಾಗಿ ಕಾಂಗ್ರೆ ಮತ್ತು ಆರ್.ಎಸ್.ಎಸ್.ಗಳೊಟ್ಟಿಗೆ ಚುನಾವಣಾ ಮೈತ್ರಿ ಹೊಂದಿತ್ತು ಮತ್ತು ಬಿ.ಇ.ಎಲ್. ಕಾರ್ಖಾನೆಯಲ್ಲಿ ಎ.ಐ.ಟಿ.ಯು.ಸಿ. ನೇತೃತ್ವದ ಬಿ.ಇ.ಇ.ಯು. (BEEU)ನ ಹಿಂದಿನ ಪ್ರಧಾನಕಾರ್ಯದರ್ಶಿ ಕಾಂ. ಎಂ. ಎಸ್.ಸಿ. ರಾವ್ ಮತ್ತಿತರ ಸಂಗಾತಿಗಳು ಸಿ.ಐ.ಟಿ.ಯು.ಗೆ ಸೇರಿದಾಗಲೂ ನಾವು ಕೆಂಬಾವುಟದ ರೀತಿಯ ವರದಿ ಪ್ರಕಟಿಸಿರಲಿಲ್ಲ.

ಅಸಹ್ಯ ಪ್ರಚಾರ ವಿಪರೀತಕ್ಕಿಟ್ಟುಕೊಂಡಾಗ ಸತ್ಯಸಂಗತಿ ಬಯಲಿಗೆಳೆಯುವದು ನಮಗೆ ಅನಿವಾರ್ಯವಾಗುವುದು. ಇನ್ನಾದರೂ ಸತ್ಯಕ್ಕೆ ಹತ್ತಿರವಾದ ಸುದ್ದಿ ಪ್ರಕಟಿಸಲಿ. ಅಸಹ್ಯ ಭಾಷೆ (ಉದಾ...ಸಿ.ಐ.ಟಿ.ಯು. ಮುಖಂಡರಿಗೆ ಹೊಟ್ಟೆ ಉರಿದಿರಬೇಕು) ಬಳಸುವುದನ್ನು ಕೈಬಿಡಲಿ. ●

ಪೇಜಾವರ ಮಠಾಧೀಶರಿಗೆ ಸವಾಲು

"ಅಖಂಡ ಹಿಂದುತ್ವದ ಬಗ್ಗೆ ಮತ್ತು ಹಿಂದುಗಳೆಲ್ಲಾ ಒಂದೇ ಎಂದು ಹೇಳುವ ಪೇಜಾವರ ಸ್ವಾಮಿಗಳು ದಲಿತರ ಬಗ್ಗೆ ನಿಜವಾದ ಅನುಕಂಪವಿದ್ದಲ್ಲಿ ದಲಿತ ಯುವಕನೋರ್ವನನ್ನು ತನ್ನ ಉತ್ತರಾಧಿಕಾರಿಯನ್ನಾಗಿ ನೇಮಿಸಲಿ; ಅದು ಅಸಾಧ್ಯವಾದಲ್ಲಿ ದಲಿತರ ಮೇಲಾಗುತ್ತಿರುವ ಅತ್ಯಾಚಾರ, ದೌರ್ಜನ್ಯ ವಿರುದ್ಧ ಹೋರಾಟ ನಡೆಸಲು ಕಾರ್ಯಕ್ರಮಹಾಕಿಕೊಳ್ಳಲಿ; ಅದೂ ಆಗದಿದ್ದಲ್ಲಿ ಕೃಷಿ ಕಾರ್ಮಿಕರಾದ ದಲಿತರಿಗೆ ಕನಿಷ್ಠ ಕೂಲಿ, ಭೂಮಿ, ಆರೋಗ್ಯ, ವಸತಿ, ವಿದ್ಯಾಭ್ಯಾಸವೇ ಮೊದಲಾದ ಸಾಮಾಜಿಕ ಸೌಲಭ್ಯತೆಗಳನ್ನು ಒದಗಿಸುವ ಹೋರಾಟದಲ್ಲಿ ಪಾಲ್ಗೊಳ್ಳಲಿ" ಎಂದು ದಲಿತ ಸಂಘರ್ಷ ಸಮಿತಿಯ ನಾಯಕ ಬಿ. ರಾಮಕೃಷ್ಣರು ಸವಾಲೆಸೆದಿದ್ದಾರೆ. ಅವರು ಮಂಗಳೂರಿನಲ್ಲಿ 10-5-81 ರಂದು ನಡೆದ ದ. ಕ. ಜಿಲ್ಲಾ ದ.ಸಂ.ಸ. ಸಭೆಯನ್ನು ಉದ್ದೇಶಿಸಿ ಮಾತನಾಡುತ್ತಿದ್ದರು.

"ಬಂಡವಾಳಶಾಹಿಗಳು, ಭೂಮಾಲೀಕರು ದಲಿತರನ್ನು ಕಬ್ಬಿಣದ ಕತ್ತಿ (ಚೂರಿ)ಯಿಂದ ಕೊಚ್ಚುತ್ತಿದ್ದರೆ ಸ್ವಾಮಿಗಳು ಬಂಗಾರದ ಕತ್ತಿಯಿಂದ ಇರಿಯುತ್ತಿದ್ದಾರೆ. ಅದರ ನೋವಿನ ಅನುಭವ ಒಂದೇ. ವರ್ಗವ್ಯವಸ್ಥೆ ಸೃಷ್ಟಿಸಿದ ಜಾತೀಯತೆಯನ್ನು ಕಿತ್ತೆಸೆಯಲು ವರ್ಗಸಂಘರ್ಷ ಅನಿವಾರ್ಯ" ಎಂದು ನುಡಿದರು.

ಈ ಸಭೆಗೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಂಗಳಗಂಗೋತ್ರಿಯ ಪ್ರಾಧ್ಯಾಪಕ ಪ್ರೊ. ಕೆ. ಸಿ. ಬಸವರಾಜ್ ಮಾತನಾಡುತ್ತಾ, ದಲಿತರ ವಿಮೋಚನೆಗೆ ಹೋರಾಟವೊಂದೇ ದಾರಿ; ಜಿಲ್ಲೆಯಾದ್ಯಂತ ಹೋರಾಟ ಚುರುಕುಗೊಳಿಸಲು ಕರೆಯಿತ್ತರು.

ಸಭೆಯನ್ನುದ್ದೇಶಿಸಿ ಬಿ. ವಾಸು ಮಾಸ್ತರ, ಸರಸ್ವತಿ, ಬಿ. ನಿಂಗಯ್ಯ, ಗೋವಿಂದ ಮೊದಲಾದವರು ಮಾತನಾಡಿದರು. ಕೊನೆಗೆ ಜಿಲ್ಲಾಮಟ್ಟದ ಸಮಿತಿಯನ್ನು ರಚಿಸಲಾಯಿತು. ಸಂಚಾಲಕರಾಗಿ ಕಾಂ.ಬಿ.ರಾಮಕೃಷ್ಣ, ಸಹಸಂಚಾಲಕರಾಗಿ ಜಿ.ಎಸ್. ಶೇಖರ ಆಯ್ಕೆಯಾಗಿದ್ದಾರೆ. ●

ಬಿ. ಜಿ. ಎಂ. ಎಲ್. ಎದುರು ಧರಣಿ

ಬಿ. ಜಿ. ಎಂ. ಎಲ್. ಆಡಳಿತ ವರ್ಗಕ್ಕೆ ಮತ್ತು ಸರಕಾರಕ್ಕೆ ಕಾರ್ಮಿಕರ ಬೇಡಿಕೆಗಳ ಬಗ್ಗೆ ಒತ್ತಾಯಿಸಲು 8-5-81ರಂದು ಬಿ.ಜಿ.ಎಂ.ಎಲ್. ಎದುರು ಧರಣಿ ಸತ್ಯಾಗ್ರಹ ನಡೆಸಿದರು. ಕಾಂ. ಎಸ್. ಸವರೀದಾಸ್, ಟಿ. ಎಸ್. ಮಣಿ, ಎ. ಕಣ್ಣನ್, ವಿ. ಮುತ್ತುಕುಮಾರ, ಎಂ. ಕೃಷ್ಣನ್, ಡಿ. ಪಿ. ಫ್ರಾನ್ಸಿಸ್, ಎಸ್. ಧನಸಿಂಗ್ ಮುಂತಾದವರು ಧರಣಿಯಲ್ಲಿ ಪಾಲ್ಗೊಂಡಿದ್ದರು.

ತಾತ್ಕಾಲಿಕ ಕೆಲಸಗಾರರನ್ನು ಖಾಯಂ ಮಾಡುವದು, 500ರೂ. ತಾತ್ಕಾಲಿಕ ಪರಿಹಾರ ಇವೇ ಮೊದಲಾದ ಬೇಡಿಕೆಗಳನ್ನು ಮುಂದಿಟ್ಟು ಧರಣಿ ಸತ್ಯಾಗ್ರಹ ನಡೆಸಲಾಯಿತು.

(5ನೇ ಪುಟದಿಂದ)

ಸಮಾಜವಾದದ ಕುರಿತು ಇಂದಿರಾಗಾಂಧಿ

ಸಮಾಜವಾದಿ ಆರ್ಥಿಕ ವ್ಯವಸ್ಥೆಯ ವೈಶಿಷ್ಟಗಳು

ಯಾವುದೇ ಆರ್ಥಿಕ ವ್ಯವಸ್ಥೆಯಲ್ಲಿ ಸಾರ್ವಜನಿಕ ಕ್ಷೇತ್ರವಿದ್ದ ಮಾತ್ರಕ್ಕೆ, ಅಥವಾ ಅದಕ್ಕೆ ಪ್ರಧಾನ ಪಾತ್ರ ಕೊಟ್ಟ ಮಾತ್ರಕ್ಕೆ ಅದು ಸಮಾಜವಾದಿ ವ್ಯವಸ್ಥೆ ಆಗಲಾರದು. ಆ ಸಮಾಜದ ರಾಜ್ಯ ಪ್ರಭುತ್ವದ (State power) ವರ್ಗ ಲಕ್ಷಣಗಳನ್ನೂ ಗಮನಿಸಬೇಕು. ಸಮಾಜವಾದಿ ಆರ್ಥಿಕ ವ್ಯವಸ್ಥೆಯು ಕಾಲಕ್ರಮೇಣ ಉತ್ಪಾದನೆಯ ಎಲ್ಲಾ ಮಾಧ್ಯಮಗಳನ್ನು ವ್ಯಾಪಕವಾದ ಸಾಮಾಜಿಕ ಸ್ವಾಮ್ಯದಲ್ಲಿಡಲು ಉದ್ದೇಶಿಸಿದೆ. ಸಮಾಜವಾದಿ ಸಮಾಜಗಳಲ್ಲಿ ಇನ್ನೂ ಖಾಸಗೀಕ್ಷೇತ್ರ ಉಳಿದಿದ್ದರೆ, ಅದಕ್ಕೆ ಪ್ರೋತ್ಸಾಹ ಸಿಗುತ್ತಿದ್ದರೆ, ಅದರ ಪಾತ್ರ ಗೌಣ ಹಾಗೂ ತಾತ್ಕಾಲಿಕ ಅಷ್ಟೆ. ಒಂದಲ್ಲಒಂದು ಕಾಲದಲ್ಲಿ ಸಮಾಜವಾದಿ ವ್ಯವಸ್ಥೆಯಲ್ಲಿ ಎಲ್ಲಾ ಉತ್ಪಾದನಾ ಮಾಧ್ಯಮಗಳು ಸಾಮಾಜಿಕ ಸ್ವಾಮ್ಯದಲ್ಲಿಯೇ ಇರಬೇಕಾಗುವುದು. ಖಾಸಗೀಸ್ವಾಮ್ಯ ಸಂಪೂರ್ಣವಾಗಿ ಅಳಿದುಹೋಗಬೇಕಾಗುವುದು. ಆದರೆ, ಬಂಡವಾಳಶಾಹಿ ಪದ್ಧತಿಯಲ್ಲಿ ಖಾಸಗೀಸ್ವಾಮ್ಯ ಖಾಯಂ ಆಗಿ ಇರುವುದು. ಸಾಮಾಜಿಕಸ್ವಾಮ್ಯವಿರುವ ಸಾರ್ವಜನಿಕ ಕ್ಷೇತ್ರವು ಖಾಸಗೀಕ್ಷೇತ್ರಕ್ಕೆ ಪೂರಕವಾಗಿಯಷ್ಟೇ ಇರುವುದು. ಬಂಡವಾಳಶಾಹಿ ಪದ್ಧತಿಯನ್ನು ಇನ್ನಷ್ಟೂ ಶಕ್ತಿಶಾಲಿಯನ್ನಾಗಿಸಲು ಸಾರ್ವಜನಿಕಕ್ಷೇತ್ರವಿರುವುದು. ಈ ವ್ಯತ್ಯಾಸವನ್ನು ಸ್ಪಷ್ಟವಾಗಿ ಗಮನದಲ್ಲಿಟ್ಟುಕೊಳ್ಳಬೇಕು.

ಸಾರ್ವಜನಿಕಕ್ಷೇತ್ರದ ಪಾತ್ರ ಬಂಡವಾಳಶಾಹಿಯ ಬಲವರ್ಧನೆ

ನಮ್ಮ ದೇಶದಲ್ಲಿಯೇ ಸಾರ್ವಜನಿಕ ಪಾತ್ರವನ್ನು ಪರಿಶೀಲಿಸಿದರೆ, ಅದಕ್ಕೆ ಮುಖ್ಯಸ್ಥಾನ ಕೊಡಲಾಗಿದೆ ಎನ್ನುವುದು ಸತ್ಯಕ್ಕೆ ದೂರ. ಅದು ಕ್ರಮೇಣ ಸಮಾಜವಾದಿ ಸಮಾಜ ಸ್ಥಾಪಿಸಲು ಸಹಾಯವಾಗುವುದೆನ್ನುವುದೂ ಕೇವಲ ಘೋಷಣೆ. ಆರನೇ ಪಂಚವಾರ್ಷಿಕ ಯೋಜನೆಯಲ್ಲಿಯೇ ಸ್ಪಷ್ಟವಾಗಿ ತಿಳಿಸಿರುವಂತೆ, ಕೃಷಿ ಮತ್ತು ಕೈಗಾರಿಕೆ ಸೇರಿ ದೇಶದ ಒಟ್ಟು ಉತ್ಪಾದನೆಯಲ್ಲಿ ಸಾರ್ವಜನಿಕ ಕ್ಷೇತ್ರದ ಪಾಲು ಕೇವಲ ಶೇ. 6ರಷ್ಟು. ಉಳಿದ ಶೇ. 94ರಷ್ಟು ಖಾಸಗೀಕ್ಷೇತ್ರದ ಪಾಲು! ಸಂಘಟಿತ ಕೈಗಾರಿಕಾ ಕ್ಷೇತ್ರದ ಗಣಿಕೈಗಾರಿಕೆ, ಘನಉದ್ಯಮಗಳ ಉತ್ಪಾದನೆಯಲ್ಲಿಯೂ ಸಾರ್ವಜನಿಕ ಕ್ಷೇತ್ರದ ಪಾತ್ರ ಶೇ. 29 ರಷ್ಟು ಮಾತ್ರ. ಉಳಿದ ಶೇ. 71 ರಷ್ಟು ಖಾಸಗೀ ಕ್ಷೇತ್ರದಲ್ಲಿಯೇ ಇರುವುದು.

ಭಾರತ ಸ್ವಾತಂತ್ರ್ಯ ಪಡೆದಾಗ, ಆಂತರಿಕ ಮಾರುಕಟ್ಟೆ ತೀರಾ ಸ್ಥಗಿತವಾಗಿತ್ತು, ಕ್ಷೀಣವಾಗಿತ್ತು. ಅದನ್ನು ಬಲಪಡಿಸಲು ಒಟ್ಟು ಜನಸಂಖ್ಯೆಯ ಶೇ. 80ರಷ್ಟಿರುವ ಗ್ರಾಮೀಣ ಜನರ ಸ್ಥಿತಿಗತಿಗಳನ್ನು ಸುಧಾರಿಸಿ ಆಂತರಿಕ ಮಾರುಕಟ್ಟೆಯನ್ನು ವಿಸ್ತರಿಸಲು ಕ್ರಾಂತಿಕಾರಕ ಭೂಸುಧಾರಣೆಯನ್ನು ಕಾರ್ಯಗತಗೊಳಿಸಲು ದೇಶದ ದುರ್ಬಲ ಬಂಡವಾಳಶಾಹಿ ವರ್ಗ ವಿಫಲವಾಯಿತು. ಇಂತಹ ಪರಿಸ್ಥಿತಿಯಲ್ಲಿ ಬಂಡವಾಳಶಾಹಿ ಆರ್ಥಿಕ ಅಭಿವೃದ್ಧಿಗಾಗಿ ಸರಕಾರವೇ ಭಾರೀ ಪ್ರಮಾಣದಲ್ಲಿ ಬಂಡವಾಳ ಹೂಡಲು ಮುಂದಾಯಿತು. ಇದರಿಂದ ಖಾಸಗೀ ಕ್ಷೇತ್ರಕ್ಕೆ ಅತ್ಯಗತ್ಯವಾದ ನೀರಾವರಿ, ವಿದ್ಯುತ್, ಪೆಟ್ರೋಲಿಯಂ, ಕಬ್ಬಿಣ, ಕಲ್ಲಿದ್ದಲು, ಉಕ್ಕು, ಯಂತ್ರೋಪಕರಣ, ಸಾರಿಗೆ-ಸಂಪರ್ಕ, ವಿಜ್ಞಾನ-ತಂತ್ರಜ್ಞಾನ, ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾಧ್ಯವಾಯಿತು. ಜೊತೆಯಲ್ಲಿಯೇ ಖಾಸಗೀಕ್ಷೇತ್ರದ ಚಟುವಟಿಕೆಗಳಿಗೆ ಸಾಕಷ್ಟು ಮಾರುಕಟ್ಟೆಯೂ ಸಿಗುವಂತಾಯಿತು. ಇಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಭಾರೀ ಬಂಡವಾಳಬೇಕಾಗುವುದರಿಂದ, ಉತ್ಪಾದನೆಗೆ ದೀರ್ಘಕಾಲ ಬೇಕಾಗುವುದರಿಂದ ಮತ್ತು ಹೆಚ್ಚುಲಾಭ ಇಲ್ಲದೇ ಇರುವುದರಿಂದ, ಇವೆಲ್ಲವುಗಳನ್ನೂ ಸಾರ್ವಜನಿಕಕ್ಷೇತ್ರಕ್ಕೆ ಮೀಸಲಾಗಿರಿಸಲಾಯಿತು. ಕಡಿಮೆ ಬಂಡವಾಳ, ಅಲ್ಪಾವಧಿಯಲ್ಲಿ ಉತ್ಪಾದನೆ, ಹೆಚ್ಚುಲಾಭವಿರುವ ಕೃಷಿ, ಕೈಗಾರಿಕೆ, ವ್ಯಾಪಾರವಾಣಿಜ್ಯ, ಇತ್ಯಾದಿಗಳೆಲ್ಲವೂ ಖಾಸಗೀಕ್ಷೇತ್ರಕ್ಕೆ ಮೀಸಲಾಗಿರಿಸಲಾಯಿತು.

ಸಾರ್ವಜನಿಕಕ್ಷೇತ್ರಕ್ಕೆ ಬಂಡವಾಳ ಎಲ್ಲಿಂದ ?

ಖಾಸಗೀಕ್ಷೇತ್ರಕ್ಕೆ ಅತ್ಯಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಸಾರ್ವಜನಿಕ ಕ್ಷೇತ್ರಕ್ಕೆ ಭಾರೀ ಪ್ರಮಾಣದಲ್ಲಿ ಬಂಡವಾಳ ಎಲ್ಲಿಂದ ಸಿಗುವುದು ? ಬಂಡವಾಳಶಾಹಿಗಳಲ್ಲಿ ಮತ್ತು ಭೂಮಾಲಕರಲ್ಲಿ ಸಂಗ್ರಹವಾಗುತ್ತಿರುವ ಲಾಭಾದಾಯಗಳನ್ನು ಇದಕ್ಕೆ ಹೆಚ್ಚು ಬಳಸಲಾಗುವುದಿಲ್ಲ. ಬದಲು, ಸಾರ್ವಜನಿಕ ಬಂಡವಾಳ ಹೂಡುವಿಕೆಯಿಂದ ಬಂಡವಾಳಶಾಹಿಗಳ ಮತ್ತು ಭೂಮಾಲಕರ ಆದಾಯ ಸಂಪತ್ತು ಇನ್ನಷ್ಟು ಹೆಚ್ಚುತ್ತಿರುವುದು. ಸಾರ್ವಜನಿಕ ಕ್ಷೇತ್ರಕ್ಕೆ ಸಂಪನ್ಮೂಲಗಳನ್ನು ಒದಗಿಸಲು 'ವಿದೇಶಿ ನೆರವು', 'ಅಪ್ರತ್ಯಕ್ಷ ತೆರಿಗೆ' ಮತ್ತು 'ಕೊರತೆ ಹಣ ಸೃಷ್ಟಿ', ಈ ಮಾರ್ಗಗಳನ್ನು ಅವಲಂಬಿಸಲಾಗುತ್ತಿದೆ.

ಒಟ್ಟು ತೆರಿಗೆ ಸಂಗ್ರಹದಲ್ಲಿ ಶೇ. 85ರಷ್ಟು ಅಪ್ರತ್ಯಕ್ಷರಿಗೆಯಾಗಿದ್ದು, ಅದರಲ್ಲಿಯೂ ಶೇ. 56ರಷ್ಟು ತಿಂಗಳಿಗೆ ರೂ. 100 ಕ್ಕಿಂತಲೂ ಕಡಿಮೆ ಖರ್ಚುಮಾಡುತ್ತಿರುವ ಭಾರತದ ಬಡಜನರಿಂದ ಸಂಗ್ರಹಿಸಲಾಗುತ್ತಿದೆ (ಝಾ ಸಮಿತಿಯ ವರದಿ). ಕೊರತೆ ಹಣ ಸೃಷ್ಟಿಯಿಂದಾಗಿ ಹಣದುಬ್ಬರ ಉಂಟಾಗುವುದು. ಪರಿಣಾಮವಾಗಿ ಜನಸಾಮಾನ್ಯರ ಗ್ರಾಹಕಶಕ್ತಿಯು ಕುಸಿಯುವುದು. ಇದೂ ಒಂದು ಅಪ್ರತ್ಯಕ್ಷ ತೆರಿಗೆ. ಇದರಿಂದ ಸರಕಾರದ ಆದಾಯ ಹೆಚ್ಚುವುದು, ಬಂಡವಾಳಶಾಹಿಗಳ ಮತ್ತು ಭೂಮಾಲಕರ ಲಾಭಾದಾಯ ಹೆಚ್ಚುವುದು. ಕೊರತೆಹಣ ಸೃಷ್ಟಿಯಿಂದ ಸಂಗ್ರಹಿಸಿದ ಬಂಡವಾಳವನ್ನು ಸರಕಾರವು ಸಾರ್ವಜನಿಕ ಕ್ಷೇತ್ರಗಳಲ್ಲಿ ತೊಡಗಿಸುವುದರಿಂದ ಪುನಃ ಅದರ ಪ್ರಯೋಜನವು ಬಂಡವಾಳಶಾಹಿಗಳಿಗೂ ಭೂಮಾಲಕರಿಗೂ ದೊರೆತು ಅವರ ಲಾಭಾದಾಯ ಸಂಪತ್ತು ಹೆಚ್ಚುವುದು. ಸರಕಾರದ ಸಹಾಯಧನ, ರಾಷ್ಟ್ರೀಕೃತ ಬ್ಯಾಂಕು, ವಿಮೆ, ಮತ್ತಿತರ ಹಣಕಾಸು ಸಂಸ್ಥೆಗಳ ನೆರವು ಹೆಚ್ಚಾಗಿ ಬಂಡವಾಳಶಾಹಿಗಳಿಗೂ ಭೂಮಾಲಕರಿಗೂ ಕಡಿಮೆ ಬಡ್ಡಿಯಲ್ಲಿ ಸುಲಭ ಶರತ್ತುಗಳಲ್ಲಿ ದೊರೆಯುವುದು. ಇಷ್ಟಲ್ಲದೆ, ಖಾಸಗೀಕ್ಷೇತ್ರದ ಲಾಭ ಉಳಿಸಲು, ಅಗತ್ಯ ಸಾಮಗ್ರಿಗಳನ್ನು, ಯಂತ್ರೋಪಕರಣಗಳನ್ನು ಆಮದು ಮಾಡಿ ಸುಲಭದರಗಳಲ್ಲಿ ಸರಕಾರವು ಒದಗಿಸುವುದು. ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿರುವಾಗ ಬಂಡವಾಳಶಾಹಿಗಳ ಮತ್ತು ಭೂಮಾಲಕರ ಉತ್ಪಾದನೆಗೆ ಲಾಭದಾಯಕವಾದ ವಿದೇಶಿ ಮಾರುಕಟ್ಟೆಯನ್ನೂ ಸರಕಾರ ಒದಗಿಸುವುದು.

ಮೊದಲೇ ತಿಳಿಸಿದಂತೆ ಮಾರ್ಕ್ಸ್‌ವಾದಿ ಸಮಾಜವಾದಿ ರಾಷ್ಟ್ರಗಳಲ್ಲಿ ಆರ್ಥಿಕ ಅಭಿವೃದ್ಧಿಯ ಯೋಜನೆಯು ಬಂಡವಾಳಶಾಹಿ ರಾಷ್ಟ್ರಗಳಲ್ಲಿನಂತೆ ವಿದೇಶಿ ನೆರವು, ಅಪ್ರತ್ಯಕ್ಷ ತೆರಿಗೆ, ಕೊರತಹಣ ಸೃಷ್ಟಿ, ಇತ್ಯಾದಿಗಳನ್ನು ಅವಲಂಬಿಸಿರುವುದಿಲ್ಲ. ರಾಷ್ಟ್ರದ ಉತ್ಪಾದನೆ, ವಿತರಣೆಯ ಲಾಭಗಳಿಕೆಯು ಬಂಡವಾಳಶಾಹಿಗಳ, ಭೂಮಾಲಕರ ಬೊಕ್ಕಸಕ್ಕೆ ಸೇರುವುದಿಲ್ಲ. ಬದಲು, ಸಮಾಜವಾದಿ ರಾಷ್ಟ್ರಗಳಲ್ಲಿ ಉತ್ಪಾದನೆ, ವಿತರಣೆಗಳ ಬಹುಪಾಲು ಸಾರ್ವಜನಿಕ ಸ್ವಾಮ್ಯ ಹಾಗೂ ನಿಯಂತ್ರಣದಲ್ಲಿರುವುವು. ಅವುಗಳ ಲಾಭಗಳಿಕೆಯು ಜನಸಾಮಾನ್ಯರಿಗೆ, ಶ್ರಮಿಕವರ್ಗಕ್ಕೆ ಪುನರ್ ವಿತರಣೆಮಾಡಲಾಗುವುದು. ನಿರುದ್ಯೋಗ, ಬೆಲೆಏರಿಕೆಯನ್ನು ಸಂಪೂರ್ಣ ಕಿತ್ತೊಗೆಯಲಾಗುವುದು. ಜನಸಾಮಾನ್ಯರ, ಶ್ರಮಿಕವರ್ಗದ ವೇತನಮಟ್ಟ, ಜೀವನಮಟ್ಟ ನಿರಂತರವಾಗಿ ಹೆಚ್ಚುತ್ತಿರುವುದು.

ಇಂದಿರಾಗಾಂಧಿ ಸಮಾಜವಾದದಲ್ಲಿ ಜನರು ನಿರ್ಗತಿಕರಾಗುತ್ತಿದ್ದಾರೆ

ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ತಿಳಿಸಿದಂತೆ, ಭಾರತದ ಜನರು ಹೆಚ್ಚುಹೆಚ್ಚು ನಿರ್ಗತಿಕರಾಗುತ್ತಿದ್ದಾರೆ. ಬಡತನರೇಖೆಗಿಂತಲೂ ಕೆಳಮಟ್ಟಕ್ಕಿಳಿಯುತ್ತಿದ್ದಾರೆ. ಕೃಷಿಕೂಲಿಕಾರರ ಸಂಖ್ಯೆ ಹೆಚ್ಚುತ್ತಿದೆ, ವ್ಯವಸಾಯಗಾರರ ಸಂಖ್ಯೆ ಕಡಿಮೆಯಾಗುತ್ತಿದೆ. ಹಳ್ಳಿಯ ಜನರು ನಿರ್ಗತಿಕರಾಗಿ ಪಟ್ಟಣಗಳಿಗೆ ವಲಸೆ ಹೋಗುತ್ತಿದ್ದಾರೆ, ನಿರುದ್ಯೋಗಿಗಳಾಗಿ ಅರೆ ಉದ್ಯೋಗಿಗಳಾಗಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಬೆಲೆಏರಿಕೆ ಹಣದುಬ್ಬರದಿಂದ ಜನರ ಗ್ರಾಹಕ ಶಕ್ತಿ ಕುಸಿಯುತ್ತಿದ್ದು, ಆಂತರಿಕ ಮಾರುಕಟ್ಟೆ ಕ್ಷಯಿಸುತ್ತಿದೆ. ನಿರುದ್ಯೋಗ, ವಿದ್ಯಾವಂತರ ನಿರುದ್ಯೋಗ ಹೆಚ್ಚುತ್ತಿದೆ. ವಿದೇಶಿ ಮಾರುಕಟ್ಟೆಯನ್ನುಗಳಿಸಲು ಕಷ್ಟಸಾಧ್ಯವಾಗುತ್ತಿದೆ. ಕಾರಣ ಬಂಡವಾಳಶಾಹಿ ಪದ್ಧತಿಯ ಜಾಗತಿಕ ದುಃಸ್ಥಿತಿ ತೀವ್ರವಾಗುತ್ತಿದೆ. ವಿದೇಶಿ ಬಂಡವಾಳ ಭಾರತದಂತಹ ಬಡರಾಷ್ಟ್ರದಲ್ಲಿ ತನ್ನ ಮಾರುಕಟ್ಟೆಯನ್ನು ಹುಡುಕುತ್ತಿದೆ.

ಅನಿವಾರ್ಯವಾಗಿ ದೇಶಿಯ ಬಂಡವಾಳಗಾರರು, ಅವರ ಸರಕಾರ ವಿದೇಶಿ ಬಂಡವಾಳಶಾಹಿಗಳು, ಬಹುರಾಷ್ಟ್ರೀಯ ಸಂಸ್ಥೆಗಳ ಅಸಮಾನತೆಯ ಶರತ್ತುಗಳಿಗೆ ಶರಣುಹೋಗುತ್ತಿವೆ. ಜನರ ಸಮಸ್ಯೆಗಳು, ಸಂಕಷ್ಟಗಳು, ಸಂಕಷ್ಟಗಳು ಹೆಚ್ಚುತ್ತಿವೆ. ಹೋರಾಟಗಳು ಭುಗಿಲೇಳುತ್ತಿವೆ. ಅವುಗಳನ್ನು ಬಲಪ್ರಯೋಗದಿಂದ ಹತ್ತಿಕ್ಕಲಾಗುತ್ತಿದೆ. ಪ್ರಜಾಪ್ರಭುತ್ವವು ಶಕ್ತಿಹೀನವಾಗುತ್ತಿದೆ, ಸರ್ವಾಧಿಕಾರಿ ಶಕ್ತಿಗಳು ತಲೆ ಎತ್ತಿವೆ. ಇದು ಇಂದಿರಾಗಾಂಧಿಯ ಸಮಾಜವಾದ !

(ಸಾಧಾರ : ಪೀಪಲ್ಸ್ ಡೆಮೊಕ್ರಸಿ, ಮಾರ್ಚ್ 22-29 ಮತ್ತು ಏಪ್ರಿಲ್ 5ರ ಸಂಚಿಕೆಯಲ್ಲಿನ ಕಾರ್ತಿಕ್ ರ್‍ಯಾ ಅವರ ಲೇಖನಗಳು)

○

ನೇಕಾರ ಕಾರ್ಮಿಕರ ವಿಜಯ

ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ದಿನಾಂಕ 19-4-81ರಿಂದ ಮುಷ್ಕರದಲ್ಲಿದ್ದ ರಾಣಿಬೆನ್ನೂರ ತಾಲ್ಲೂಕಿನ ನೇಕಾರ ಕಾರ್ಮಿಕರು ಜಯಗಳಿಸಿದ್ದಾರೆ. 29-4-81ರಂದು ರಾಣಿಬೆನ್ನೂರಿನಲ್ಲಿ ಲೇಬರ್ ಇನ್‌ಸ್ಪೆಕ್ಟರರ ಸಮ್ಮುಖದಲ್ಲಿ ಮಾತುಕತೆಯ ನಂತರ ಒಪ್ಪಂದವಾಯಿತು. ಅಂದು ರಾಣಿಬೆನ್ನೂರ ತಾಲ್ಲೂಕಿನ ತುಮ್ಮಿನಕಟ್ಟೆಯಿಂದ ನೇಕಾರ ಕಾರ್ಮಿಕರು 23 ಕಿ. ಮಿ. ದೂರವನ್ನು ಕಾಲ್ನಡಿಗೆಯಿಂದ ಕ್ರಮಿಸಿ ರಾಣಿಬೆನ್ನೂರಿಗೆ ಆಗಮಿಸಿದ್ದರು. ಅಲ್ಲದೇ ತಾಲ್ಲೂಕಿನ ಎಲ್ಲ ನೇಕಾರ ಕಾರ್ಮಿಕರು ರಾಣಿಬೆನ್ನೂರಿನಲ್ಲಿ ಹಿಂದೆಂದೂ ನಡೆಯದ ಬೃಹತ್ ಮೆರವಣಿಗೆಯನ್ನು ನಡೆಸಿದರು. ಒಪ್ಪಂದಕ್ಕೆ ಕಾರ್ಮಿಕರ ಪರವಾಗಿ ಕಾಂ. ವಿ. ಎನ್. ಹಳಕಟ್ಟಿ ಮತ್ತು ಕಾಂ. ಎಸ್. ಎಫ್. ಕ್ಯಾದಗಿಯವರು, ಮಾಲೀಕರ ಪರವಾಗಿ ಶ್ರೀ ಜಿ. ಎನ್. ಕುರುಮತ್ತಿಯವರು ಅಂಕಿತಹಾಕಿದ್ದಾರೆ. ಈ ಒಪ್ಪಂದದ ಮೇರೆಗೆ ಪ್ರತಿ ಕಾರ್ಮಿಕನಿಗೆ ರೂ. 20 ರಿಂದ ರೂ. 35ರವರೆಗೆ ವೇತನದಲ್ಲಿ ಹೆಚ್ಚಳವಾಗಿದೆ.

ಮೆರವಣಿಗೆ ಹೊರಟು ವಿಜಯೋತ್ಸವ ಆಚರಿಸಿದ ನೇಕಾರ ಕಾರ್ಮಿಕರು ತಮ್ಮ ಹೋರಾಟಕ್ಕೆ ಸಕ್ರೀಯ ಸಹಕಾರ ನೀಡಿದವರಿಗೆಲ್ಲ ಕೃತಜ್ಞತೆ ಸಲ್ಲಿಸಿದರು. ○

ಡಿ. ವೈ. ಓ. ಉದ್ಘಾಟನೆ

ಗುಲ್ಬರ್ಗಾ ಜಿಲ್ಲೆಯ ಶಹಾಪುರ ತಾಲ್ಲೂಕಿನ ವನದುರ್ಗದಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಘಟಕವೊಂದನ್ನು ಪ್ರಾರಂಭಿಸಲಾಗಿದೆ. ಈ ಘಟಕದ ಅಧ್ಯಕ್ಷರಾಗಿ ತಿಮ್ಮಪ್ಪ ನಾಯಕ ಜಹಾಗೀರ್‌ದಾರ್, ಉಪಾಧ್ಯಕ್ಷರಾಗಿ ಹಾಜಿಮಿಯಾ ಮತ್ತು ತಿಮ್ಮಪ್ಪನಾಯ್ಕ ದೇವಕುಂಟೆ. ಕಾರ್ಯದರ್ಶಿಯಾಗಿ ವೆಂಕಟೇಶ ರಾಜರ, ಸಹಾಯಕ ಕಾರ್ಯದರ್ಶಿಗಳಾಗಿ ಸಿದ್ದಣ್ಣ ಸಜ್ಜನ ಹಾಗೂ ಕಾಶೀಪತಿ ಪತ್ತಾರ ಮತ್ತು ಖಜಾಂಚಿಯಾಗಿ ಬೋರಣ್ಣ ಗುರಗುಂಟಿ ಇವರುಗಳು ಚುನಾಯಿತರಾಗಿದ್ದಾರೆ.

○

ಕಾಫಿ ಕ್ಯೂರಿಂಗ್ ಕಾರ್ಮಿಕರ ಗೆಲುವು

ಚಿಕ್ಕಮಗಳೂರಿನ ಎರಡು ಕಾಫೀ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕರು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ಹೂಡಿದ್ದರು. (ವಿವರ ಹಿಂದೆ ಐಕ್ಯರಂಗದಲ್ಲಿ ಪ್ರಕಟವಾಗಿದೆ). 1-5-81ರಂದು ಕಾರ್ಮಿಕ ಸಂಘದ ಪ್ರತಿನಿಧಿಗಳ ಮತ್ತು ಆಡಳಿತ ಮಂಡಲಿಗಳ ಸಭೆ ಕಾರ್ಮಿಕ ಇಲಾಖೆಯ ಸಹಾಯಕ ಸಂಧಾನಾಧಿಕಾರಿಗಳ ಸಮ್ಮುಖದಲ್ಲಿ ನಡೆದು ಒಪ್ಪಂದಕ್ಕೆ ಬರಲಾಗಿದೆ.

ಈ ಒಪ್ಪಂದದಂತೆ ತಿಂಗಳ ಸಂಬಳದ ಪ್ರತಿ ನೌಕರರಿಗೆ ಮಧ್ಯಂತರ ಪರಿಹಾರವಾಗಿ ರೂ. 30 ದೊರೆಯುವದು. ದಿನಗೂಲಿ ಕೆಲಸಗಾರನಿಗೆ ದಿನವೊಂದಕ್ಕೆ 50 ಪೈಸೆ, ಕಾಫೀ ಸಂಸ್ಕರಣ ಮಾಡುವ ಮಹಿಳಾ ಕಾರ್ಮಿಕರಿಗೆ 50ಪೈಸೆ, ಹೆಚ್ಚಳವಾಗಿದೆ. ಈ ಮಧ್ಯಂತರ ಪರಿಹಾರವು 1-1-81ರಿಂದ ದೊರೆಯುವದು.

ಹೋರಾಟದಲ್ಲಿ ಸಹಕರಿಸಿದವರಿಗೆಲ್ಲ ಕಾರ್ಮಿಕರ ಪರವಾಗಿ ಸಂಘದ ಕಾರ್ಯದರ್ಶಿ ಕಾಂ. ಎ. ಕೆ. ವಿಶ್ವನಾಥ ಅಭಿನಂದನೆ ಸಲ್ಲಿಸಿದ್ದಾರೆ.

○

ಸಾಮ್ರಾಜ್ಯಶಾಹೀ ವಿರೋಧಿ ದಿನಾಚರಣೆ

ಮಂಗಳೂರು

ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಮತ್ತು ಭಾರತ ವಿದ್ಯಾರ್ಥಿ ಫೆಡರೇಶನ್‌ಗಳ ಮಂಗಳೂರು ತಾಲ್ಲೂಕು ಸಮಿತಿಗಳ ಜಂಟೀ ಆಶ್ರಯದಲ್ಲಿ ಅಖಿಲ ಭಾರತ ಡಿ.ವೈ.ಎಫ್.ಐ. ಕರೆಯ ಮೇರೆಗೆ 26-4-81ರಂದು ಮಂಗಳೂರಿನಲ್ಲಿ ಸಾಮ್ರಾಜ್ಯಶಾಹೀ ವಿರೋಧಿ ದಿನಾಚರಣೆಯನ್ನು ಆಚರಿಸಲಾಯಿತು. ಅಲ್ಲದೇ "ಮೀಸಲಾತಿಯನ್ನು ಏಕೆ ಬೆಂಬಲಿಸಬೇಕು" ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

ಪ್ರಾರಂಭದಲ್ಲಿ ಡಿ. ವೈ. ಓ.ದ ಮಂಗಳೂರು ತಾಲ್ಲೂಕು ಸಮಿತಿ ಸಂಚಾಲಕರಾದ ಕಾಂ. ಬಿ. ಉಮಾನಾಥರು ಸ್ವಾಗತಿಸಿದರು. ವಿಚಾರ ಸಂಕಿರಣದ ಅಧ್ಯಕ್ಷತೆಯನ್ನು ಡಿ.ವೈ.ಓ.ನ ದ. ಕ. ಜಿಲ್ಲಾ ಸಮಿತಿ ಸದಸ್ಯರಾದ ಕಾಂ. ಯು. ಬಿ. ನಾರಾಯಣರು ವಹಿಸಿದ್ದರು.

ಮಂಗಳೂರು "ಸಮುದಾಯ"ದ ಅಧ್ಯಕ್ಷರಾದ ಕಾಂ. ಬಿ. ಮಾಧವರು ಮಾತನಾಡುತ್ತಾ, ಸಾಮ್ರಾಜ್ಯಶಾಹಿಗಳು ಭಾರತದಲ್ಲಿ ನಡೆಸುತ್ತಿರುವ ಪಿತೂರಿಯನ್ನು, ಇತರ ದೇಶಗಳಲ್ಲಿ ಸಮಾಜವಾದಿ ಚಳುವಳಿಯನ್ನು ಹತ್ತಿಕ್ಕಲು ಸಿ.ಐ.ಎ. ನಡೆಸುತ್ತಿರುವ ಪ್ರಯತ್ನಗಳನ್ನು ವಿವರಿಸಿದರು.

ಮೀಸಲಾತಿಯ ಬಗ್ಗೆ ಮಾತನಾಡಿದ ಆನಂದ ಉಲ್ಲಾಳರು ಗುಜರಾತಿನಲ್ಲಿ ನಡೆಯುತ್ತಿರುವ ಮೀಸಲಾತಿ ವಿರೋಧಿ ಮತ್ತು ಪರ ಚಳುವಳಿಗಳನ್ನು ಪ್ರಸ್ತಾಪಿಸಿ, ಆರ್ಥಿಕವಾಗಿ-ಸಾಮಾಜಿಕವಾಗಿ ತುಳಿತಕ್ಕೊಳಗಾದ ಹಿಂದುಳಿದ ಪಂಗಡಗಳಿಗೆ ಪ್ರಸಕ್ತ ಸ್ಥಿತಿಯಲ್ಲಿ ಮೀಸಲಾತಿಯನ್ನು ಮುಂದುವರಿಸಲೇಬೇಕು ಎಂದರು.

ಕಾರ್ಯಕ್ರಮದ ಕೊನೆಗೆ ಎಸ್. ಎಫ್. ಐ.ನ ಕಾಂ. ಸಾಧು ಪೂಜಾರಿಯವರು ಧನ್ಯವಾದಗಳನ್ನರ್ಪಿಸಿದರು.

ಧಾರವಾಡ

2-5-81ರಂದು ಧಾರವಾಡದಲ್ಲಿ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಜಿಲ್ಲಾ ಘಟಕದ ಆಶ್ರಯದಲ್ಲಿ ಸಾಮ್ರಾಜ್ಯಶಾಹಿ ವಿರೋಧಿ ಸಪ್ತಾಹ ಆಚರಿಸಲಾಯಿತು. ಸಾಮ್ರಾಜ್ಯವಾದವನ್ನು ವಿಶ್ಲೇಷಿಸುವ ವಿಚಾರ ಸಂಕಿರಣ ಏರ್ಪಡಿಸಲಾಗಿತ್ತು.

"ಬಹುರಾಷ್ಟ್ರೀಯ ಕಂಪನಿಗಳು ಹಾಗೂ ನಿರುದ್ಯೋಗ" ವಿಷಯದ ಮೇಲೆ ಕರ್ನಾಟಕ ವಿಶ್ವವಿದ್ಯಾಲಯದ ಡಾ|| ವಿ. ಎನ್. ದೇಶಪಾಂಡೆ, ಸಾಮ್ರಾಜ್ಯವಾದದ ಯುದ್ಧಕೋರ ನೀತಿ"ಯ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಧಾರವಾಡ ಜಿಲ್ಲಾ ಕಾರ್ಯದರ್ಶಿ ಕಾಂ. ವಿ. ಎನ್. ಹಳಕಟ್ಟಿ, ಸಾಮ್ರಾಜ್ಯವಾದ ಮತ್ತು "ಯುವಜನತೆಯ ಹೋರಾಟ" ಎಂಬ ವಿಷಯದ ಮೇಲೆ ಎಸ್. ಎಫ್. ಐ. ರಾಜ್ಯಸಮಿತಿ ಉಪಾಧ್ಯಕ್ಷ ಕಾಮ್ರೇಡ್ ರುದ್ರಪ್ಪಕಾಯಿ ಮಾತನಾಡಿದರು.

ಸಭೆಯ ಅಧ್ಯಕ್ಷತೆಯನ್ನು ಬಂಡಾಯ ಸಾಹಿತ್ಯ ಸಂಘಟನೆಯ ಸಂಚಾಲಕ ಡಾ. ಬಿ. ಕೃಷ್ಣಮೂರ್ತಿ ವಹಿಸಿದ್ದರು.

●

ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆಯ ಅಂಗವಾಗಿ ಕರ್ನಾಟಕ ರಾಜ್ಯ ಪ್ರಥಮ ಮಹಿಳಾ ಸಮ್ಮೇಳನವು ಜೂನ್ 1, 2, ಮತ್ತು 3ರಂದು ಬೆಂಗಳೂರಿನ ಚಾಮರಾಜಪೇಟೆ ಮೂರನೆ ಮುಖ್ಯ ರಸ್ತೆಯಲ್ಲಿರುವ ರಾಮೇಶ್ವರ ಕಲ್ಯಾಣ ಮಂಟಪದಲ್ಲಿ ಜರಗಲಿದೆ. ಒಂದರಂದು ಸಂಜೆ 5-30ಕ್ಕೆ ಉದ್ಘಾಟನಾ ಸಮಾರಂಭ. ಕಾಂ. ಸುಶೀಲಾ ಗೋಪಾಲನ್, ಎಂ. ಪಿ; ಡಾ. ಅನುಪಮಾ ನಿರಂಜನ; ಕಾಂ. ವಿಮಲ ರಣದಿವೆ; ಕಾಂ. ದೇವಕಿ ವಾರಿಯರ್; ಕಾಂ. ಮೇರಿ ದೇವಸ್ಯ ಮೊದಲಾದವರು ಭಾಗವಹಿಸುವರು. ಪ್ರತಿನಿಧಿ ಶುಲ್ಕ ಐದು ರೂಪಾಯಿ. ಪ್ರತಿನಿಧಿಗಳು ಒಂದರಂದು ಮಧ್ಯಾಹ್ನದ ಮೇಲೆ 3 ಘಂಟೆಗೆ ಮೊದಲೇ ಸಮ್ಮೇಳನದ ಜಾಗವನ್ನು ತಲುಪಬೇಕು. ದೂರದಿಂದ ಬರುವವರು ಒಂದರಂದು ಬೆಳಗ್ಗೆಯೇ ಬೆಂಗಳೂರನ್ನು ಸೇರಬೇಕು. ಆದಷ್ಟು ಹೆಚ್ಚಿಗೆ ಪ್ರತಿನಿಧಿಗಳು ಬರುವಂತೆ ಪ್ರಯತ್ನಿಸಬೇಕು.

ಸಮ್ಮೇಳನ ಸ್ವಾಗತ ಸಮಿತಿ.

ಸಿ ಐ ಟಿ ಯು ಗೆ ಸೇರಿರುವ ಕಾರ್ಮಿಕ ಸಂಘಗಳ ಗಮನಕ್ಕೆ

30-5-1970ರಂದು ಕಲ್ಕತ್ತಾದಲ್ಲಿ ನಡೆದ ಅಖಿಲ ಭಾರತ ಕಾರ್ಮಿಕ ಸಂಘಗಳ ಸಮ್ಮೇಳನದಲ್ಲಿ ಸಿ.ಐ.ಟಿ.ಯು. ಸ್ಥಾಪನೆಯಾಯಿತು. 30-5-81ರಂದು ಸಿ. ಐ. ಟಿ ಯು. ಸ್ಥಾಪನೆಯ 11ನೆಯ ವಾರ್ಷಿಕೋತ್ಸವವನ್ನು ಸಿ.ಐ.ಟಿ.ಯು.ಗೆ ಸೇರಿರುವ ಪ್ರತಿಯೊಂದು ಕಾರ್ಮಿಕ ಸಂಘವೂ ಆಚರಿಸಬೇಕು. ಅಂದು ಆಫೀಸುಗಳ ಮೇಲೆ ಸಿ.ಐ.ಟಿ.ಯು. ಬಾವುಟವನ್ನು ಹಾರಿಸಬೇಕು. ಅಂದು ನಡೆಸುವ ಸಭೆಗಳಲ್ಲಿ ಸಿ.ಐ.ಟಿ.ಯು. ಸಾಧನೆಗಳನ್ನು ವಿವರಿಸುವುದರ ಜೊತೆಯಲ್ಲಿ ಜೂನ್ 4ರಂದು ಮುಂಬಯಿಯಲ್ಲಿ ನಡೆಯುವ ರಾಷ್ಟ್ರೀಯ ಸಮಾವೇಶದ ಮಹತ್ವವನ್ನು ವಿವರಿಸಬೇಕು.

ಸಿ. ನಂಜುಂಡಪ್ಪ
ಪ್ರಧಾನಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿ

ಬೆಂಗಳೂರು
ತಾ. 19-5-1981

ಐಲು ದೊರೆಗಳು

ಹಿಂದೆ ದಿಲ್ಲಿ ಸಿಂಹಾಸನವನ್ನು ಮೊಹಮ್ಮದ್ ಬಿನ್ ತೊಘಲಕ್ ಎಂಬ ದೊರೆ ಆಳುತ್ತಿದ್ದ. ತನ್ನ ಐಲು ಕೃತ್ಯಗಳಿಂದ ಇತಿಹಾಸದಲ್ಲಿ ಐಲು ದೊರೆ ಎಂದು ಅಜರಾಮರನಾಗಿದ್ದಾನೆ.

ಈ ಪುಣ್ಯಭೂಮಿಯಲ್ಲಿ ಆ ಐಲು ದೊರೆಯ ಸಂತತಿ ನಶಿಸಿಲ್ಲ. ನೂರಾರು ಸಹಸ್ರಾರು ಸಂಖ್ಯೆಯಲ್ಲಿ ವೃದ್ಧಿಸಿದ್ದಾರೆ.



ಈ ಪುಟ್ಟ ಮಗುವಿನ ಚಿತ್ರನೋಡಿ. ಈ ಮುಗ್ಧ ಹರಿಜನ ಬಾಲಕನ ಹೆಸರು ಶಿವಶಂಕರ ಎಂದು. ಉತ್ತರ ಪ್ರದೇಶದ ಬಾಂದಾ ಎಂಬ ಊರವನು.

ಈ ಮಗುವಿನ ಮೇಲೆ ಐ.ಪಿ.ಸಿ. (IPC) 107, 116 ಸೆಕ್ಷನ್‌ಗಳನ್ವಯ ಯು.ಪಿ. ಪೋಲೀಸರು ಕೇಸನ್ನು ದಾಖಲುಮಾಡಿದ್ದಾರೆ. "ಈ ಮನುಷ್ಯ ಗೋಧೂನಿ ಗ್ರಾಮದ ಲಾರೀ ಮೊದಲಾದ ಮಾರಕಾಯುಧ ಹೊಂದಿದ ಗುಂಪಿಗೆ ಸಂಬಂಧಿಸಿದ್ದಾನೆ. ಮತ್ತು ಗ್ರಾಮದ ಇಬ್ಬರಿಗೆ ಪ್ರಾಣತೆಗೆಯುವ ಹೆದರಿಕೆ ಹಾಕಿದ್ದಾನೆ..." ಇದು ಕೇಸ್ ವಿವರ.

ಈಗ ನಂಬುವಿರಾ ? ತೊಘಲಕ್ ಸಂತತಿ ನಶಿಸಿಲ್ಲವೆಂದು ?

(ನಂತರ ಬಾಲಕನನ್ನು ಭಾರೀ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದಾರೆ.)

ಸಾಧಾರ–ನ್ಯೂಯೇಜ್

●

ಮದುವೆಯ ಸವಿನೆನಪಿಗಾಗಿ ಕಾಣಿಕೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಗಳೂರು ತಾಲ್ಲೂಕು ಸಮಿತಿಗೆ ಮಂಗಳೂರು ದೇರೆಬೈಲ್ ಗ್ರಾಮದ, ಪಕ್ಷದ ಕಾರ್ಯಕರ್ತರಾದ ಕಾಂ. ಕೆ. ಹೊನ್ನಯ್ಯ ದೇವಾಡಿಗರು ತಮ್ಮ ಮಗ ಕಾಂ. ಕೆ. ಬಾಬು ದೇವಾಡಿಗ ಮತ್ತು ಅಳಿಯ ಸೀತಾರಾಮ ಇವರ ಮದುವೆಯ ಸವಿನೆನಪಿಗಾಗಿ ಪಕ್ಷಕ್ಕೆ 25ರೂ. ನೀಡಿದ್ದಾರೆ. ನೂತನ ದಂಪತಿಗಳಿಗೆ ಐಕ್ಯರಂಗ ಶುಭ ಕೋರುತ್ತದೆ.

ಬೆಳ್ಳಿ ಹಬ್ಬದ ಆಚರಣೆ

ಚಿಕ್ಕಮಗಳೂರಿನಲ್ಲಿರುವ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ 1956ರಲ್ಲಿ ಸ್ಥಾಪನೆಯಾಗಿ ಆ ವರ್ಷದ ಮೇ 17ರಂದು ರಿಜಿಸ್ಟರ್ ಆಯಿತು. ಸ್ಥಾಪನೆಯ ಬೆಳ್ಳಿಯುಹಬ್ಬದ ಆಚರಣೆಯ ಅಂಗವಾಗಿ ಚಿಕ್ಕಮಗಳೂರಿನಲ್ಲಿರುವ ಮಲೆನಾಡು ಶಿಕ್ಷಣ ಸಂಸ್ಥೆಯ ಪ್ರೌಢಶಾಲೆಯಲ್ಲಿ 17-5-1981ರಂದು ಸರಳ ಸಮಾರಂಭ ನಡೆಯಿತು. ಪ್ರಾರಂಭದ ವರ್ಷಗಳಲ್ಲಿ ಈ ಸಂಘದ ಸದಸ್ಯರಾಗಿ, ಕಾರ್ಯಕರ್ತರಾಗಿ ಇಂದು ಪದಾಧಿಕಾರಿಗಳಾಗಿರುವವರು, ಅಂದಿನ ವರ್ಷಗಳಲ್ಲಿ ಕಾರ್ಯಕರ್ತರಾಗಿದ್ದು ಇಂದು ಬೇರೆಬೇರೆ ವೃತ್ತಿಗಳಲ್ಲಿ ಇರುವವರು, ಇಂದಿನ ಕಾರ್ಯಕರ್ತರು, ಸದಸ್ಯರು ಈ ಸಮಾರಂಭದಲ್ಲಿ ಪಾಲ್ಗೊಂಡರು.

ತೋಟಕಾರ್ಮಿಕರ ಚಳುವಳಿಯನ್ನು ರೂಪಿಸುವುದರಲ್ಲಿ ಕರ್ನಾಟಕ ಪ್ರೊವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಪಾತ್ರದ ಬಗ್ಗೆ ಕಾಂ. ಸಿ. ನಂಜುಂಡಪ್ಪನವರು ಮಾತನಾಡಿದರು. ಕಾಂ. ಎ. ಕೆ. ವಿಶ್ವನಾಥ್, ಕಾಂ. ಎ. ಸಿ. ಕೇಶವ, ಕೆ. ರಾಮದಾಸ್ ಮತ್ತು ಕೆ. ವಿ. ಮ್ಯಾಥ್ಯೂ ಅಂದಿನ ದಿವಸಗಳ ನೆನಪು ಮಾಡಿಕೊಂಡರು. ಕಾಂ. ಪಿ. ರಾಮಚಂದ್ರರಾಯರು ಸಂಘದ ಭವಿಷ್ಯದ ಕಣ್ಣೋಟದ ಬಗ್ಗೆ ಮಾತನಾಡಿದರು.

●

ಸಿ.ಐ.ಟಿ.ಯು.ಗೆ ಸೇರಿರುವ ಮತ್ತು ಸೇರಲಿರುವ ಕಾರ್ಮಿಕ ಸಂಘಗಳ ಅವಗಾಹನೆಗೆ

ಬೆಲೆ ಏರಿಕೆಯ ವಿರುದ್ಧ ಮತ್ತು ಭಾರತ ಸರ್ಕಾರದ ಕಾರ್ಮಿಕ ವಿರೋಧಿ ನೀತಿಯ ವಿರುದ್ಧ ರಾಷ್ಟ್ರೀಯ ಸಮಾವೇಶವು ಮುಂಬಯಿಯಲ್ಲಿ ಷಣ್ಮುಖಾನಂದ ಹಾಲಿನಲ್ಲಿ ಜೂನ್ 4ರಂದು ನಡೆಯುತ್ತದೆ. ಈ ಸಮಾವೇಶವನ್ನು ಸಿ.ಐ.ಟಿ.ಯು., ಎ.ಐ.ಟಿ.ಯು.ಸಿ., ಎಚ್.ಎಂ.ಎಸ್., ಬಿ.ಎಂ.ಎಸ್., ಐ.ಎನ್.ಟಿ.ಯು.ಸಿ., ಯು.ಟಿ.ಯು.ಸಿ., ಯು.ಟಿ.ಯು.ಸಿ. (ಲೆನಿನ್ ಸರಣಿ) ಟಿ.ಯು.ಸಿ.ಸಿ. ಜಂಟಿಯಾಗಿ ಸಂಘಟಿಸಿವೆ. ಈ ಸಮಾವೇಶವು ಜೂನ್ 4ರಂದು ಬೆಳಗ್ಗೆ 10 ಗಂಟೆಗೆ ಪ್ರಾರಂಭವಾಗಿ ಆ ದಿವಸವೇ ಮುಕ್ತಾಯವಾಗುತ್ತದೆ.

ನಮ್ಮ ಎಲ್ಲಾ ಕಾರ್ಮಿಕ ಸಂಘಗಳೂ ಈ ಸಮಾವೇಶಕ್ಕೆ ಪ್ರತಿನಿಧಿಗಳನ್ನು ಕಳುಹಿಸಬೇಕು.

ಪ್ರತಿನಿಧಿಗಳು ಮುಂಬಯಿ ತಲುಪುವ ವೇಳೆಯನ್ನು "ಕಾಂ. ಪಿ. ಕೆ. ಕುರಣೆ, ಪ್ರಧಾನಕಾರ್ಯದರ್ಶಿ, ಸಿ.ಐ.ಟಿ.ಯು. ಮಹಾರಾಷ್ಟ್ರ ರಾಜ್ಯಸಮಿತಿ, 'ಜನಶಕ್ತಿ', ಗ್ಲೋಬ್ ಮಿಲ್ ಪ್ಯಾಸೇಜ್. ವೊರ್ಲಿ, ಮುಂಬಯಿ–400 013" ಈ ವಿಳಾಸಕ್ಕೆ ತಿಳಿಸಬೇಕು. ವಾಪಸು ಬರಲು, ರೈಲು ಬಸ್ಸುಗಳಲ್ಲಿ ಸ್ಥಳದ ಮೀಸಲಾತಿಗೆ ಇದೇ ವಿಳಾಸಕ್ಕೆ ಹಣ ಕಳುಹಿಸಿ ಪತ್ರ ಬರೆಯಬೇಕು.

ಆಯಾ ಕಾರ್ಮಿಕ ಸಂಘಗಳು ಕಳುಹಿಸುವ ಪ್ರತಿನಿಧಿಗಳ ಹೆಸರುಗಳನ್ನು ಕೂಡಲೇ ರಾಜ್ಯಸಮಿತಿಗೆ ತಿಳಿಸಬೇಕು.

ಸಿ.ಐ.ಟಿ.ಯು. ಮಹಾರಾಷ್ಟ್ರ ರಾಜ್ಯಸಮಿತಿಯು ಸಿ.ಐ.ಟಿ.ಯು. ಸಂಘಗಳಿಂದ ಹೋಗುವ ಪ್ರತಿನಿಧಿಗಳಿಗೆ ವಸತಿ ಸೌಕರ್ಯವನ್ನು ಏರ್ಪಡಿಸುತ್ತದೆ.

ಸಿ. ನಂಜುಂಡಪ್ಪ
ಪ್ರಧಾನಕಾರ್ಯದರ್ಶಿ
ಸಿ.ಐ.ಟಿ.ಯು. ಕರ್ನಾಟಕ ರಾಜ್ಯಸಮಿತಿ

ಬೆಂಗಳೂರು
ತಾ. 19-5-1981

ಧನ್ಯವಾದಗಳು

ಐಕ್ಯರಂಗ ಮೇ ವಿಶೇಷಾಂಕವನ್ನು ಹೊರತರಲು ಸಹಾಯ ಮಾಡಿದ ನಮ್ಮ ಓದುಗರು ಮತ್ತು ಚಂದಾದಾರರಿಗೂ, ಪತ್ರಿಕಾ ಏಜಂಟರುಗಳಿಗೂ, ಲೇಖಕರಿಗೂ ಮತ್ತು ಜಾಹೀರಾತುಗಳನ್ನಿತ್ತು ಸಹಕರಿಸಿದವರಿಗೂ ಐಕ್ಯರಂಗ ಕೃತಜ್ಞತೆ ಸಲ್ಲಿಸುತ್ತದೆ.

ಸಂಪಾದಕ ಮಂಡಳಿ

ತಿದ್ದುಪಡಿ

ಐಕ್ಯರಂಗ ಇದೇ ಸಂಚಿಕೆಯ 6ನೇ ಪುಟದಲ್ಲಿ "ಕೆಂಬಾವುಟದ ಕುಲ್ಸಿತ ಪ್ರಚಾರ" ಎಂದು ತಪ್ಪಾಗಿ ಮುದ್ರಿತವಾಗಿದೆ. ಕುಲ್ಸಿತ ಬದಲು ಕುತ್ಸಿತ ಎಂದು ಓದಿಕೊಳ್ಳಬೇಕಾಗಿ ವಿನಂತಿ.

ಐಕ್ಯರಂಗಕ್ಕೆ

ಚಂದಾದಾರರಾಗಿರಿ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560 003, and Published by him on behalf of the Communist Party of India (Marxist) Karnataka State Committee, L-56, K. V. Temple Street Sultanpet, Bangalore-560 053. Editorial and managerial office : L-56, K. V. Temple Street, Sultanpet Bangalore-560 053. Phone-24154
EDITOR : M. K. BHAT